Sir, the financial implications, the economic implications, have not been fully studied by the Government. Why I say so is that this House has passed a number of Bills—a number of Bills have been enacted, but their full effects have not yet been realised. There are three Acts which have been passed. The first is the Mysore Motor Vehicles Taxation on Passengers and Goods Act of 1961. This Act has been recently implemented and the full effects of that Act have not yet been realised. We are not in a position to know what is the actual income that is derived from this tax. Similarly, Sir, the surcharge on land revenue to the extent of 35 per cent will be realised by the end of this year, *i.e.*, 1962-63. Similarly about the Betterment Levy. The full effects of that Betterment Levy are also not known to us. They are yet to be known. The full effects are yet to be realised. So, taking into consideration these three enactments, we are not in a position to know what is the exact income that the Government is going to derive from them. That is why I said that the Government is in a mighty hurry to get through these new measures of taxation. The full realisation of the three previous measures would be known by the end of this year and it would have been proper and also it would have been in the fitness of things if the Government would have entertained these new measures after taking into consideration the full realisation of those three enactments. Government could have waited for some time.

Now coming to the present Bill, I fail to understand, Sir, why the Government is so keen on levying charges and surcharges on land revenue, when there is sufficient scope, enough scope, to raise the land revenue itself. As pointed out by my Hon'ble friend Mr. M. R. Patil, there is scope to raise the land revenue of the State by bringing it to a uniform level. The rate of land assessment differs from region to region in the State. In the old Mysore area, it is very low and in Hyderabad Karnatak area, it is very high. We have been supplied with a statistical chart known as Mysore at a glance, 1962. From that I have worked out some figures with a view to compare the income derived from the land revenue with the population in the various regions. Sir, in the Belgaum Division, the population is 72,77,000 and odd and the land revenue that is derived from the Belgaum Division is 1,15,00,000. The ratio to the population and land revenue is 1 : 1.8. In the Gulbarga Division, the population is 31,40,000 and the land revenue derived from that division is 82,86,000. The ratio of population to land revenue is 1 : 2.6. That is the highest in the State. Similarly in the Bangalore Division, the pouplation is 67,62,000, while the land revenue is 75,06,000. In Mysore Division, the population is 55,70,000, while the land revenue that is derived is 92,56,000. From the old Mysore area, the population is 1,18,00,000, while the land revenue derived is 1,28,00,000 and the ratio works out to 1 : 1.08. In Bellary, Coorg and South Kanara, the ratio works out to 1 : 1.4, 1 : 1.4 and 1 : 1.5 respectively. It will thus be seen that the land revenue, the rate of assessment in the old Mysore area is the lowest, and whenever any surcharge is levied on land revenue, the integrated areas have to pay more and suffer more, while the old Mysore areas have to pay less. That is the effect, Sir. Then, Sir, any surcharge on land revenue is an additional burden on the integrated areas. Sir, if the Government were to raise the rate of land assessment to a uniform level, it is very possible that the Government may get an additional

(Sri B. R. SUNTHANKAR)

income to the extent of a crore and more. I therefore fail to understand why Government is not doing that. Instead of doing that, they are increasing or levying charges and surcharges on land revenue. Already a surcharge of 35 per cent is levied on land revenue. Now, in addition, this 12 nP. or 12 per cent is going to be added. It comes to 47 per cent surcharge on land revenue. Already, as my Hon'ble friend Mr. M. R. Patil pointed out, we people in the Bombay area, are paying a local fund, to the extent of three annas in a rupee, *i.e.*, about 20 per cent. In all we have to pay, in Bombay area, about 67 per cent surcharge on land revenue. As regards this uniform rate, the Mysore Resources and Economy Committee have also recommended that a uniform rate should be levied in respect of land revenue. Besides, there is the question also of resettlement. The A. G. R. Committee has also recommended that it should be completed within a year. If a uniform rate of assessment of land revenue is levied throughout the State and if the work of resettlement is carried out within a very short period, the Government will certainly get more income from this item of the land revenue itself. Instead of doing that Government is trying to levy charges and surcharges.

Then, there is one more point. As regards land revenue, there are heavy arrears remaining with assessees. As has been pointed out by the A.G.R. Committee, in 1958-59, the arrears of land revenue were to the tune of 1,59,00,000. That has been stated by the Committee. In the old Mysore area, there a e also heavy arrears remaining. According to the Administration Repoit of the State, for the year 1958-59, copies of which have been supplied to us, in Mysore Division alone, as found on page 1‹ 0, the arrears of land revenue at the end of the year were Rs. 45,87,000.

Such high arrears are there and Government are not making any concerted efforts to recover these arrears. If these arrears are recovered, Government will get additional funds to execute the various schemes.

The Taxation Enquiry Commission in their report have also said that "the existing disparities of assessment should first be corrected within set limits and to the extent practicable with reference to the criterion, that can be applied on a State-wide basis." In view of the recommendation of the Taxation Enquiry Commission I doubt very much whether we can levy this surcharge on land revenue. I would read the relevant extracts from the report of the Taxation Enquiry Commission:

> "We are of the view that within the limits set for revision a standardised assessment should continue indefinitely and State Governments should not levy surcharges over and above it and that all surcharges on the standardised assessment should be by local bodies for local services. In other words, we consider that as a source of revenue for State Governments land revenue should be frozen within the narrow variations of standardised level of assessment and all further tax contribution from land in the form of cesses and surcharges on such revenue should be left for the exclusive use of local bodies."

That is the definite opinion of the Taxation Enquiry Commission. They first recommend that the States should first standardise the assessment, which has not been done in this State. So let us first have standardised assessment throughout the State and let us bring assessment of land revenue to a uniform level. Next all the surcharges in the opinion of the Commission should be left entirely to the local bodies as that is the province of the local bodies and the State Government should not dabble with it. So this surcharge according to the view of the Taxation Enquiry Commission is altogether out of place and it should be entirely left to the local authorities.

Then, Sir, the cess proposed to be levied is 12 per cent. As pointed out

by previous speakers, this rate is very high and it should be reduced to at least 6 per cent.

Then coming to the Schedules, the taxes under Schedule B fall within the purview of the local authorities. Here we are trying to encroach upon the authority of the local bodies which is highly objectionable. Both Schedules A and B are very wide and comprehensive and they give power to Government to levy surcharge on water rate, taxes on cinematograph shows. We have already taxed cinematograph industry and again we are going to levy this surcharge also on it. Same is the case with regard to water rate also. Both Schedules A and B, particularly items 2 and 3 of Schedule A and the whole of Schedule B, are very objectionable and they should be withdrawn.

With these words and requesting the Government to withdraw this Bill I conclude.

ಶ್ರೀ ಎಸ್. ಎಸ್. ಕೊಳ್ಕೆಬೈಲ್ (ಕುಂದಾಪುರ).—ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನನುಮೋದಿಸುತ್ತಾ ಇದರಲ್ಲಿರುವ ಒಂದೆರಡು ಅಂಶಗಳನ್ನು ಮಾತ್ರ ಹೇಳುತ್ತೇನೆ. ಇದರ Statement of objects and Reasons ಓದಿದ ಕೂಡಲೆ ನಮ್ಮ ಅರ್ಥಮಂತ್ರಿಗಳು ಹೆಚ್ಚಿನ ಬುದ್ಧಿವಂತಿಕೆಯನ್ನು ಉಪಯೋಗಿಸಿ ಇದನ್ನು ಬರೆದಿರುವ ಹಾಗೆ ಕಾಣುತ್ತದೆ, ಇದರಲ್ಲಿ—

"In accordance with the provisions of the Mysore Health Cess Act, 1951, health cess at the rate of half anna in the rupee is being levied on all items of land revenue in the area of the former State of Mysore. Provision also exists in the Act to levy the cess at a rate not exceeding one anna in the rupee on other items of revenue. In the merged areas of Bombay, Coorg, Hyderabad and Madras no health cess is being levied" ಎಂದು ಹೇಳಿದ್ದಾರೆ. ಹಳೆಯ ಮೈಸೂರಿನಲ್ಲಿ ಮಾತ್ರ ಇದು ಉಂಟು, ಬಾಕಿ ಕಡೆಗಳಲ್ಲಿ ಇದನ್ನು ಹಾಕುವುದು ನ್ಯಾಯ ಎನ್ನುವ ರೀತಿಯಲ್ಲಿದೆ. ಅವರು ಮಂತ್ರಿಗಳಾಗಿದ್ದರು, ಅವರಿಗೆ ತಿಳುವಳಿಕೆ ಇದೆ. ಮದರಾಸು, ಬೊಂಬಾಯಿ, ಕೊಡಗು ಈ ಎಲ್ಲ ಕಡೆಗಳಲ್ಲಿಯೂ ಅನೇಕ ತರಡ ಸೆಸ್ಸ್ ಇದೆ. ನಮ್ಮ ಮದರಾಸಿನಲ್ಲಿ ಒಂದು ರೂಪಾಯಿಗೆ ಐದಾಣೆಯ ಪ್ರಕಾರ ಇನ್ನೂ ವಸೂಲು ಮಾಡುತ್ತಿದ್ದಾರೆ. ಹೀಗೆ ವಸೂಲು ಮಾಡುವುದು ಹಳ್ಳಿಯವರಿಂದ. ಸರ್ಕಾರಕ್ಕೆ ಹಣ ಕಡಮೆಯಾಯಿತೆಂದರೆ, ಇವರಿಗೆ ಇನ್ನೇನೂ ತೋರುವುದಿಲ್ಲ. ಸಾವಿರಾರು ಹಳ್ಳಿಯವರಿದ್ದಾರೆ ಅವರು ಅವರ ಎತ್ತುಗಳಂತಿದ್ದಾರೆ. ಅವರ ಮೇಲೆ ತೆರಿಗೆ ಹಾಕಿದರೆ ಸರಿ, ಹಣ ಬರುತ್ತದೆಂದು ತಿಳಿದುಕೊಂಡಿದ್ದಾರೆ...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನು ಅನುಮೋದಿಸುತ್ತೇವೆಂದು ಹೇಳಿದರು; ವಿರೋಧಿಸುತ್ತಿದ್ದಾರೆಯೆ ?

ಶ್ರೀ ಎಸ್. ಎಸ್. ಕೊಳ್ಕೆಬೈಲ್.—We agree to disagree and disagree to agree. I support the Bill and at the same time I want to tell something to our Government about the Bill.

ಈ ಹೊತ್ತು ತೆರಿಗೆಯನ್ನು ಹಾಕಬೇಕಾದರೆ ಬೇರೆ ಅನೇಕ ರೀತಿಯಲ್ಲಿ, ಬೇರೆ ಬಾಬುಗಳ ಮೇಲೆ ಹಾಕಬಹುದು. ಆದರೆ ಇವರ ಮನಸ್ಸಿಗೆ ಹೊಳೆಯುವುದು ಹಳ್ಳಿಯವರು. ಏಕೆಂದರೆ, ಹಳ್ಳಿಯವರು ಗಟ್ಟಿಯಾಗಿ ಮಾತನಾಡುವುದಿಲ್ಲ, ಬೊಬ್ಬೆ ಹಾಕುವುದಿಲ್ಲ, ಅದರಿಂದ ಅವರ ಮೇಲೆ ತೆರಿಗೆ ಹಾಕುತ್ತಾರೆ. ಆರೋಗ್ಯ ತೆರಿಗೆಯನ್ನು ಹಾಕಿದ್ದಾರೆ, ಅದರೆ ಹಳ್ಳಿಯವರಿಗೆ ಆಸ್ಪತ್ರೆಯ ಅನುಕೂಲವಿಲ್ಲ. ಸಾವಿರಾರು ರೂಪಾಯಿ ಖರ್ಚು ಮಾಡಿ ಎಂ.ಬಿ.ಬಿ.ಎಸ್. ಶಿಕ್ಷಣ ಕೊಡುತ್ತಾರೆ, ಅಂಥವರು ಹಳ್ಳಿಗಳಿಗೆ ಹೋಗುವುದಿಲ್ಲ. ಇಂಥ ಹಳ್ಳಿಗಳಿಗೆ ಹೋಗಲು ಸಿದ್ಧವಾಗಿಲ್ಲದವರ ಮೇಲೆ ಸರ್ಕಾರ ಹಣ ಖರ್ಚು ಮಾಡಬೇಕಾಗಿದೆ. ನಾನು ಮಲೆನಾಡಿನ ಪ್ರತಿನಿಧಿ; ಅಲ್ಲಿ ನೋಡುತ್ತಿದ್ದೇನೆ. ಹತ್ತಿಪ್ಪತ್ತು ಗ್ರಾಮಗಳಿಗೆ ಒಂದು ಆಸ್ಪತ್ರೆ ಕೂಡ ಇಲ್ಲ. ಸರ್ಕಾರವನ್ನು ಕೇಳಿದರೆ "ನಾವೇನೋ ಕೊಡುತ್ತೇವೆ, ಆದರೆ ಪ್ಲಾನಿಂಗ್ ಕಮಿಷನ್‌ನವರು ಒಪ್ಪುವುದಿಲ್ಲ, ಏನು ಮಾಡುವುದು' ಎಂದು ಹೇಳುತ್ತಾರೆ. ಆ ಪ್ಲಾನಿಂಗ್ ಕಮಿಷನ್‌ನಲ್ಲಿರುವವರು ಹಳ್ಳಿಗಳಿಗೆ ಹೋಗಿ ನೋಡಿಲ್ಲ. ಈಗ ನಮ್ಮ ರಾಜ್ಯಸರ್ಕಾರದ ಮೇಲೆ ಕೇಂದ್ರ ಸರ್ಕಾರ, ಕೇಂದ್ರ ಸರ್ಕಾರದ ಮೇಲೆ ಪ್ಲಾನಿಂಗ್ ಕಮಿಷನ್ ಇರುವಹಾಗಿದೆ. ಪ್ಲಾನಿಂಗ್ ಕಮಿಷನ್ ಹೇಳಿದ ಪ್ರಕಾರ ಆಡಳಿತ ನಡೆಸುವುದಾದರೆ ಸರ್ಕಾರ ಏಕಿರಬೇಕು ?

Sri C. J. MUCKANNAPPA.—Is he asking the Government to resign ?

ಶ್ರೀ ಎಸ್. ಎಸ್. ಕೊಳ್ಕೆಬೈಲ್.—ನಾನು ಹೇಳುತ್ತಿರುವುದು ಅವರಿಗೆ ಅರ್ಥವಾಗುವುದಿಲ್ಲವೆಂದು ಕಾಣುತ್ತದೆ.

ಪ್ಲಾನಿಂಗ್ ಕಮಿಷನ್ನಿನವರು ನಮ್ಮ ಮೈಸೂರು ದೇಶಕ್ಕೆ 16 ಪ್ರೈಮರಿ ಹೆಲ್ತ್ ಸೆಂಟರುಗಳನ್ನು ಕೊಟ್ಟಿದ್ದಾರೆ. ಅವರು ನಮ್ಮ ಆರೋಗ್ಯ ವಿಷಯದಲ್ಲಿ, ಜಾಗ್ರತೆ ತೆಗೆದುಕೊಳ್ಳಬೇಕೆಂದರೆ ಇಂತಿಷ್ಟು ಹಣ ಕೊಟ್ಟರೇ ಸಾಧ್ಯ, ಇಲ್ಲದಿದ ರೆ ಇಲ್ಲ ಎಂದು ಹೇಳಿದರೆ, ಹೇಗೆ? ನಿಮಗೆ ಹಣ ಎಲ್ಲಿಂದ ಬರುತ್ತದೋ ಅಲ್ಲಿಂದ ಹಣ ತರಬಾರದು ಎನ್ನುತ್ತೀರಿ. ಎಲ್ಲಿ ಹಣ ಬರುವುದಿಲ್ಲವೋ ಅಲ್ಲಿಂದ ಹಣ ತರಬೇಕು ಎನ್ನುತ್ತೀರಿ. ಈ ಧೋರಣೆ ಬಹಳ ವಿಚಿತ್ರವಾಗಿದೆ. ನಾನೀಗ ಪ್ರತಿಯೊಂದು ವಿಷಯವನ್ನೂ ಇಲ್ಲಿ ಎತ್ತಿ ತೋರಿಸಿ ಹೇಳಬೇಕಾಗಿಲ್ಲ. ಶ್ರೀಮಾನ್ ಎಂ. ಆರ್. ಪಾಟೀಲರು ಈ ವಿಷಯ ಬಹಳ ಚೆನ್ನಾಗಿ ಹೇಳಿದ್ದಾರೆ. ನಾನದನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ಹೊತ್ತಿನ ದಿವಸ ನಮ್ಮ ಮದ್ರಾಸ್ ಏರಿಯಾದಲ್ಲಿ ಯಾವ ತೆರಿಗೆಗಳನ್ನೂ ನೋಡುವುದಾದರೆ ಅಲ್ಲಿ ಒಂದು ರೂಪಾಯಿಗೆ 5ಆಣೆಯಷ್ಟು cess ಈಗಲೇ ಕೊಡುತ್ತಿದ್ದಾರೆ. ಅದರ ಮೇಲೆ ಈ ತೆರಿಗೆಯನ್ನು ಹಾಕಿದ್ದಾದರೆ ರೂಪಾಯಿಗೆ 7ಆಣೆ ಬೀಳುತ್ತದೆ. ನಮ್ಮಲ್ಲಿ cessಗಳೇ ಇಲ್ಲವೆಂದು ಹೇಳುವುದು ಸರಿಯಲ್ಲ. ವಿದ್ಯಾಭ್ಯಾಸದ

(ಶ್ರೀ ಎಸ್. ಎಸ್. ಕೊಳ್ಕೆಬೈಲ್)

ಸೆಸ್ಸು, ರೋಡ್ ಸೆಸ್ಸು ಮುಂತಾಗಿ ಪ್ರತಿಯೊಂದು ತರದ ಸೆಸ್ಸನ್ನೂ ನಾವು ಈಗಾಗಲೇ ಕೊಡುತ್ತಿದ್ದೇವೆ. ಹೀಗಿರುವಲ್ಲಿ ಅವುಗಳ ಜೊತೆಗೆ ಆರೋಗ್ಯ ಖಾತೆಯ ಸೆಸ್ಸನ್ನೂ ಕೊಡಬೇಕೆಂದರೆ ಏನು ಹೇಳೋಣ? ಮಾನ್ಯ ಸುನ್ಕಾಂಕರ್‌ರವರು ಹೇಳಿದ ಹಾಗೆ ಹಳೆಯ ಮೈಸೂರಿನ ಭಾಗದಲ್ಲಿ ಪ್ರತಿಯೊಂದು ತೆರಿಗೆಯೂ ಕಡಿಮೆಯಿತ್ತು. ಇಲ್ಲಿ ಮಹಾರಾಜರು ಆಳುತ್ತಿದ್ದರು; ಇದೊಂದು Part 'B' State ಆಗಿತ್ತು. ಜನರ ಜೀವನ ಮಟ್ಟ ಕಡಮೆ ಇತ್ತು. ಇಲ್ಲಿನ ನೌಕರರ ಸಂಬಳ ಕಡಿಮೆಯಿತ್ತು ನಾವು ಬಂದಮೇಲೆ ಇದಕ್ಕೆ ಹೆಚ್ಚಿನ ಮಟ್ಟ ಸ್ಥಾನಮಾನ ಸಿಕ್ಕಿದ್ದು. ಕರ್ನಾಟಕ ವಾಗದೆ ಇದ್ದರೆ ಈ ಪ್ರಶ್ನೆಗೆ ಸ್ಥಾನಮಾನವೇ ಇರಲಿಲ್ಲ. ಹೀಗೆ ನಾವು ಮೊದಲೇ ಹೆಚ್ಚು ತೆರಿಗೆ ಕೊಡುತ್ತಿದ್ದೆವು. ಅದರಲ್ಲೂ ಅತ್ಯಂತ ಹೆಚ್ಚಿಗೆ ತೆರಿಗೆ ಕೊಡುತ್ತಿದ್ದವ ರೆಂದರೆ ಮದ್ರಾಸ್ ಏರಿಯಾದಿಂದ ಬಂದವರು. ಅವರನ್ನೇ ಈಗ ಮತ್ತೆ ಮತ್ತೆ ಕೊಡಿ ಎಂದು ಕೇಳು ವುದು ಸರಿಯಲ್ಲ. ಇತ್ತ ರಸ್ತೆ ಸೌಲಭ್ಯ, ನಿರಾವರಿ ಸೌಲಭ್ಯ ಯಾವುದು ಕೇಳಲಿ ನಮಗಿಲ್ಲ. ಈ ಹೊತ್ತು ನಮಗೇನಾದರೂ ಅನುಕೂಲವು ಯಾವದಾದರೂ ಆದರೆ ಅದು ನಿಮ್ಮಿಂದಲ್ಲ. ಕೇಂದ್ರ ಸರ್ಕಾರದಿಂದ. ಆದ್ದ ರಿಂದ ನಾವೇನು ಹಣ ಕೊಟ್ಟರೂ ಅದರಿಂದ ಪ್ರಯೋ ಜನ ಸಿಕ್ಕುವುದು ಹಳೆ ಮೈಸೂರಿಗೆ. ನಮ್ಮಲ್ಲಿ ಇಂದಿಗೂ ಒಳ್ಳೆಯ ರಸ್ತೆಗಳಿಲ್ಲ; ಆಸ್ಪತ್ರೆಗಳಿಲ್ಲ. ಆದರೂ ತೆರಿಗೆ ಗಳನ್ನೂ ಹೆಚ್ಚಿಗೆ ಕೊಡುವವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರು. ಆದ್ದರಿಂದ ಈ ಸೆಸ್ಸು ಎಲ್ಲಿ ಕಡಿಮೆ ಯಿದೆಯೋ ಅಲ್ಲಿಗೆ ಹಾಕುವುದು ಸೂಕ್ತವೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ. ಆಮೇಲೆ, ನಾವು ಟ್ಯಾಕ್ಸ್ ಕೊಟ್ಟಂತೆ ಆಸ್ಪತ್ರೆಗಳನ್ನೂ ಹೆಚ್ಚು ಹೆಚ್ಚಾಗಿ ತೆರೆಯುವ ಧೋರಣೆಯನ್ನು ಇಟ್ಟುಕೊಳ್ಳಬೇಕು. ಬರೀ ಟ್ಯಾಕ್ಸ್ ಹಾಕುವುದೇ ನಿಮ್ಮ ಕೆಲಸವಲ್ಲ. ಈ ಹೊತ್ತು ಮಲೆ ನಾಡು ಪ್ರದೇಶದಲ್ಲಿ ಎಲ್ಲಿಯೂ ಸರಿಯಾದ ಆಸ್ಪತ್ರೆ ಗಳಿಲ್ಲ. ಅವರು ಆಸ್ಪತ್ರೆಗೇ ಹೋಗಬೇಕೆಂದರೆ ಹತ್ತು ಮೈಲು ದಾಟಿ ಹೋಗಬೇಕಾಗಿದೆ. ಎಷ್ಟೋ ವೇಳೆ ಹತ್ತಿರದಲ್ಲಿ ಒಬ್ಬ ಸೂಲಗಿತ್ತಿ ಸಿಕ್ಕುವುದೂ ಕಷ್ಟ. ಆದ್ದರಿಂದ ತೆರಿಗೆಯ ಹೊರೆಯು ಎಲ್ಲಿ ಕಡಿಮೆ ಯಿದೆಯೋ ಅಲ್ಲಿ ಹಾಕಿ ಆಸ್ಪತ್ರೆಯ ಸೌಕರ್ಯಗಳನ್ನೂ ಎಲ್ಲಾ ಕಡೆಯೂ ಜಾಸ್ತಿ ಮಾಡಬೇಕೆಂದು ಹೇಳು ತ್ತೇನೆ.

†ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಅಧ್ಯ ಕ್ಷರೇ ಸರ್ಕಾರದವರು ಈ ಹೆಲ್ತ್ ಸೆಸ್ಸು ಮುಂತಾದುವು ಗಳನ್ನು ತರಲು ಪ್ರಯತ್ನಿಸಿ ನಮ್ಮ ಮೇಲೆಲ್ಲಾ ಹೇರ ಹೊರಟಿರುವುದು ಮಾನ್ಯ ಸದಸ್ಯರುಗಳು ಹೇಳಿದಂತೆ ಎಷ್ಟು ಮಾತ್ರವೂ ಸಮರಸವಲ್ಲ. ನಮ್ಮ ಭಾಗಗಳು ಮೈಸೂರಿನಲ್ಲಿ ಇಂಟಿಗ್ರೇಟ್ ಆದ ತರುವಾಯ ದಿಂದಲೂ ನಾವು ಸರ್ಕಾರದವರಲ್ಲಿ ಅರಿಕೆ ಮಾಡಿ ಕೊಳ್ಳುತ್ತಲೇ ಬಂದಿದ್ದೇವೆ. ನಮ್ಮ ಭಾಗಗಳಲ್ಲಿ ರೆವಿನ್ಯೂ ಕಂದಾಯ ಇತರ ಕಡೆಗಳಿಗಿಂತಲೂ ಬಹಳ ಜಾಸ್ತಿ. ಆದ್ದರಿಂದ ನೀವೇನು ತೆರಿಗೆ ಸೆಸ್ಸುಗಳನ್ನೂ ಹಾಕುವುದಕ್ಕೆ ಪ್ರಯತ್ನಿಸುವ ಮುನ್ನ ರೆವಿನ್ಯೂ ಸೆಟಲ್ ಮೆಂಟ್ ಪ್ರಶ್ನೆಯನ್ನು ಮೊದಲು ಕೈಗೊಳ್ಳಬೇಕು: ಆಗಿನಿಂದಲೂ ಅದನ್ನ ಮಾಡುತ್ತೇವೆಂದು ಹೇಳುತ್ತ ಲಿದ್ದೂ ಇನ್ನೂ ಅದನ್ನೂ ಮಾಡಿಲ್ಲ; ಆದ್ದರಿಂದ ನಾನು ಈ ಆರೋಗ್ಯದ ಸೆಸ್ಸ್ ಮಸೂದೆಯೊಂದರ ಬಗ್ಗೆಯಲ್ಲ, ಇತರ ಯಾವ ಬಿಲ್ಲುಗಳನ್ನೇ ಆಗಲೀ ನಮ್ಮಲ್ಲಿರುವ ರೆವಿನ್ಯೂ ಕಂದಾಯದ ಏರು ಪೇರು ಗಳನ್ನು ಸರಿಪಡಿಸುವ ಮುನ್ನ ತೆಗೆದುಕೊಳ್ಳ ಬಾರದೆಂದು ಹೇಳುತ್ತೇನೆ. 195 ನೆಯ ಇಸವಿ ಯಲ್ಲೇ ಈ ಬಗ್ಗೆ ಸಭೆಯಲ್ಲಿ ವಾಗ್ದಾನ ಮಾಡಿದ್ದರೂ ಕೂಡ ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಇಲ್ಲಿ ಇನಾಂ ರದ್ದಿಯಾತಿ ಕಾನೂನು ಜಾರಿಯಾದ ಮೇಲಂತೂ ಅಲ್ಲಿ ಇನಾಂದಾರರು ಟೆನೆಂಟುಗಳಿಂದ ಬರಬೇಕಾದ ಗುತ್ತಿಗೆಯ ಭಾಗವನ್ನು 20%, 40% ನಷ್ಟು ಜಾಸ್ತಿಮಾಡಿಬಿಟ್ಟಿದ್ದಾರೆ. ಇದರಿಂದಾಗಿ ಅವರು ಗಳಿಗೆ ಬರಬಹುದಾದ ಕಾಂಪೆನ್ಸೇಷನ್ ದ್ವಿಗುಣ ವಾಗುತ್ತದೆ. ನಾಳೆ ನೀವು ಇನಾಂಗಳನ್ನೂ ಅಕ್ವೈರ್ ಮಾಡಿಕೊಂಡರೆ ಕೋಟ್ಯಾಂತರ ರೂಪಾಯಿಗಳಷ್ಟು ಹೆಚ್ಚು ಕಾಂಪೆನ್ಸೇಷನ್ ಕೊಡಬೇಕಾಗಿ ಬರುತ್ತದೆ. ಆದ್ದರಿಂದ ನಾನು ಸರ್ಕಾರದವರಲ್ಲಿ ಅರಿಕೆ ಮಾಡಿ ಕೊಳ್ಳುವುದೇನೆಂದರೆ, ಈಗಿರುವ ಹೆಚ್ಚಿಗೆ ಕಂದಾಯದ ಜೊತೆಗೆ ಈ ಹೆಲ್ತ್ ಸೆಸ್ಸನ್ನೂ ಹಾಕಿದರೆ ಬಡ ರೈತರು ಗಳಿಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ನಮ್ಮಲ್ಲಿರುವ ಹೆಚ್ಚಿಗೆ ರೆವಿನ್ಯೂ ಅಸೆಸ್‌ಮೆಂಟನ್ನು ಕಡಮೆ ಮಾಡಬೇಕೆಂದು ಎಷ್ಟು ಸಾರಿ ಹೇಳಿದರೂ ಕಿವಿಗೆ ಹಾಕಿಕೊಳ್ಳದೆ ಈಗ ಸೆಸ್ಸನ್ನು ಬೇರೆ ಆ ಹೆಚ್ಚಿಗೆ ಮಾಡಿರುವ ಕಂದಾಯದ ಮೇಲೆ ಹಾಕುವುದು ರೈತ ರನ್ನು ಅಪಾರ ದುಸ್ಥಿತಿಗೆ ಈಡು ಮಾಡುತ್ತದೆ. ಇದಕ್ಕೆ ಸರ್ಕಾರದವರು ಅವಕಾಶ ಕೊಡಕೂಡದು: ನಮ್ಮ ಭಾಗದಲ್ಲಿ ಬಾರ್ಡರ್ ಗಲಾಟೆಯಿದೆ. ನೀರಿನ ರೆವಿನ್ಯೂ ಸೆಟಲ್‌ಮೆಂಟ್ ಮಾಡದಿರುವುದನ್ನೇ ತೋರಿಸಿ ಅಲ್ಲಿ ಮರಾಠಿಗರು ಜನರನ್ನು ಬೊಂಬಾ ಯಿಗೆ ಸೇರಿಕೊಳ್ಳುವುದಕ್ಕೆ ಪ್ರಚೋದನೆಗೊಳಿಸುತ್ತಿ ದ್ದಾರೆ. ಹೀಗಿರುವಲ್ಲಿ ನೀವೀಗ ಈ ಸೆಸ್ಸನ್ನು ಬೇರೆ ಹಾಕಿದರೆ ಬಹಳ ಕೆಟ್ಟ ಪರಿಣಾಮವುಂಟಾಗುತ್ತದೆ. ಆದ್ದರಿಂದ ತಾವು ಮುನ್ನ ರೆವಿನ್ಯೂ ಸೆಟಲ್‌ಮೆಂಟ್ ಮಾಡಿ ಹೆಚ್ಚಿಗೆ ಮಾಡಿರುವ ಕಂದಾಯವನ್ನು ಸಸ್ಪೆಂಡ್‌ಮಾಡಿ ಆಮೇಲೆ ಈ ಹೆಲ್ತ್ ಸೆಸ್ಸನ್ನು ಬೇಕಿದ್ದರೆ ತರಬಹುದೆಂದು ಹೇಳುತ್ತೇನೆ.

12-30 P.M.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರ).—ಸಭಾಪತಿ ಗಳೇ, ಈಗಾಗಲೇ ನಮ್ಮ ಮನಸ್ಸಿಗೆ ವಿರೋಧ ವಾದಂಥ, ಬಡ ಜನತೆಯ ಮೇಲೆ ಏಟು ಬೀಳತಕ್ಕ ಮನರಂಜನೆ ತೆರಿಗೆ ವಿಧೇಯಕಕ್ಕೆ, ಈ ಸಭೆ ಒಪ್ಪಿಗೆಕೊಟ್ಟು ಪಾಸ್‌ಮಾಡಿತು. ಈಗ ನಮ್ಮ ಮುಂದಿರುವ ಆರೋಗ್ಯ ಸೆಸ್ ಬಿಲ್ ಏನಿದೆ, ಅದನ್ನು ನೋಡಿ ಅದರಲ್ಲಿ ಏನು ಅಡಕವಾಗಿದೆ ಯೆಂದು ಕೇಳಿದರೆ, ಸರ್ಕಾರವನ್ನು ನಡೆಸತಕ್ಕಂಥ ಹಣಕಾಸಿನ ಮಂತ್ರಿಗಳೊಬ್ಬರನ್ನು ಬಿಟ್ಟರೆ, ಯಾವ ಪಾರ್ಟಿ ಸರ್ಕಾರ ನಡೆಸುತ್ತಿದೆಯೊ ಆ ಪಾರ್ಟಿಯ ಮೆಂಬರುಗಳು ಕೂಡ ಈ ಆರೋಗ್ಯ ಸೆಸ್ಸನ್ನು ಹಾಕುವುದಕ್ಕೆ ಇಚ್ಛೆಪಡುವುದಿಲ್ಲ. ಈ ಸಭೆಯಲ್ಲೇನೇ ಸರ್ಕಾರ ತನ್ನ ಪಕ್ಷದ ಜನರಿಗೆ ಮನ ಒಪ್ಪುವಂತೆ ಹೇಳಿ ಅವರ ಸರಿಯಾದ ಒಪ್ಪಿಗೆ ಪಡೆದಿಲ್ಲ. ಶ್ರೀಮಾನ್ ಎಂ. ಆರ್ ಪಾಟೀಲರು ಮಾತನಾಡಿದಾಗ ಇದು ವ್ಯಕ್ತ ವಾಯಿತು. ಶ್ರೀಮಾನ್ ಕೊಳಕೆ ಬೈಲ್‌ರವರು ಮಾತ ನಾಡಿದಾಗ, ಈ ವಿಧೇಯಕ ಸರಿಯಾದುದಲ್ಲ, ಸಾಧು ವಾದುದಲ್ಲವೆಂದು ಅಪ್ಪಣೆ ಕೊಡಿಸಿದರು. ತಾವೇ ಅರ್ಥಮಾಡಿಕೊಳ್ಳಿ; ನಿಮ್ಮ ಪಕ್ಷದಲ್ಲಿ ಭಿನ್ನಾಭಿಪ್ರಾಯ ವಿದೆ. ಇಂಥ ಸುಂಕವನ್ನು ಜನಗಳ ಮೇಲೆ ಹೇರಬಾರದು, ಹೇರುವುದು ಸರಿಯಲ್ಲ. ನನ್ನ ಸ್ನೇಹಿತರಾದಂಥ ಮತ್ತು ಜನ ಸಾಮಾನ್ಯರನ್ನು ಪ್ರತಿನಿಧಿಸತಕ್ಕಂಥ ಮಂತ್ರಿಗಳು ಪೂರ್ಣವಾಗಿ

ಇದನ್ನು ಅರ್ಥಮಾಡಿಕೊಳ್ಳಬೇಕು ಎಂದು ಅಧ್ಯಕ್ಷರ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ತಾನೇ ಬಹಳ ಸುಮಧುರವಾದ ಕೋಕಿಲೆ ಕಂಠದಿಂದ ಮನರಂಜನೆ ವಿಷಯದಲ್ಲಿ ಹಣಕಾಸಿನ ಮಂತ್ರಿಗಳು ಉತ್ತರ ಹೇಳಿದ್ದನ್ನು ಕೇಳಿ ಮುಳುಗಿ ಹೋಗಿದ್ದೆ; ಅದು ಕರ್ಕಶವಾಗಿದ್ದರೆ ಬೇಡ ಅನ್ನಿಸುತ್ತಿತ್ತು, ಬೇಡವೆಂದು ಹೇಳುತ್ತಿದ್ದೆ; ಮಧುರ ವಾಣಿಯಿಂದ ಬಂದಿದ್ದರಿಂದ ಸ್ವಲ್ಪ ಯೋಚನೆಮಾಡಿ ಎಂದು ಹೇಳುವುದು ಅರ್ಥಸಚಿವರು ಈಗ ತಾನೇ ಮಾತ್ರ ಮಂತ್ರಿ ಪದವಿಗೆ ಬಂದಿದ್ದೀರಿ. ಸ್ವಲ್ಪ ಕಾಲ ಯೋಚನೆಮಾಡಿ, ಸುಂಕವನ್ನು ಜನತೆಯಮೇಲೆ ಹೇರುವುದರಿಂದ ಜನ ನಿಮ್ಮನ್ನು ನಿಂದಿಸುತ್ತಾರೆ. ಸರ್ಕಾರವನ್ನು ನಿಂದಿಸುವುದಕ್ಕೆ ಮೊದಲು ಯಾವ ಪುಣ್ಯಾತ್ಮ ಇದನ್ನು ತಗೆದುಕೊಂಡು ಬಂದನೋ ಎಂದು ಮೊದಲು ಆತನನ್ನೇ ನಿಂದಿಸುತ್ತಾರೆ. ಆದ್ದರಿಂದ ಸ್ವಲ್ಪ ಆ ಕಡೆಯೂ ದೃಷ್ಟಿಕೊಡಬೇಕು ಎಂದು ನಮ್ಮ ಜಂಬಂಡಿ ಜತ್ತಿಯವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. 300 ಲಕ್ಷ ಚಿಲ್ಲರೆಯಿಂದ 600 ಲಕ್ಷದವರೆಗೆ ಆರೋಗ್ಯ ಕಾಪಾಡುವುದಕ್ಕೋಸ್ಕರ ವಿಶಾಲ ಮೈಸೂರಿನಲ್ಲಿ ಖರ್ಚುಮಾಡುತ್ತಾ ಇದ್ದೇವೆ, ಜನಗಳ ಆರೋಗ್ಯ ಭಾಗ್ಯ ಕಾಪಾಡುವುದಕ್ಕೋಸ್ಕರ ಸರ್ಕಾರದವರು ನಿರಂತರವಾದ ಪ್ರಯತ್ನ ಮಾಡಿದ್ದಾರೆ; ಒಂದು, ಎರಡು ಮತ್ತು ಮೂರನೆಯ ಯೋಜನೆಗಳಲ್ಲಿ ಮಾಡಬೇಕಾದ ಕೆಲಸಗಳು ಬೇಕಾದಷ್ಟು ಇವೆ, ಅದಕ್ಕೋಸ್ಕರ ಹಣ ಕಾಸು ಬೇಕಾದಷ್ಟು ಬೇಕು, ಮೂರನೇ ಯೋಜನೆಯನ್ನು ನಾವು ಸಂಪೂರ್ಣವಾಗಿ ಸಫಲಗೊಳಿಸಬೇಕಾದರೆ, ಕಾಸು ಬೇಕು ಎಂದು ಹೇಳಿದರು. ಮೈಸೂರಿನಲ್ಲದೆ, ಮದ್ರಾಸ್ ಭಾಗದಲ್ಲಿ, ಬೊಂಬಾಯಿ ಭಾಗದಲ್ಲಿಲ್ಲ, ಹೈದರಾಬಾದ್ ಭಾಗದಲ್ಲಿಲ್ಲ. ಎಲ್ಲ ಭಾಗಗಳಲ್ಲಿಯೂ ಇಲ್ಲದೆ ಇರತಕ್ಕಂಥ ಒಂದು ಶಾಸನವನ್ನು ತೆಗೆದುಕೊಂಡು ಬಂದು 40 ಲಕ್ಷ ರೂಪಾಯಿ ಸಂಪಾದನೆ ಮಾಡುತ್ತೇವೆ, ಯಾವ ಅಧಿಕಾರಿಯ ಸಂಬಳವನ್ನೂ ಜಾಸ್ತಿ ಮಾಡುವುದಿಲ್ಲ, ಯಾವ ಅಧಿಕಾರಿಗೂ ಕಡಿಮೆ ಮಾಡುವುದಿಲ್ಲ, ದುಡ್ಡನ್ನು ಅಪವ್ಯಯ ಮಾಡುವುದಿಲ್ಲ, ನೀತಿವಂತರಾಗಿ ರಾಜ್ಯಭಾರ ಮಾಡುತ್ತೇವೆ ಎಂದು ಸುಮ್ಮನೆ ಹೇಳಿದ್ದನ್ನೇ ಹೇಳಿದ್ದಾರೆ. ಅದಕ್ಕೋಸ್ಕರವಾಗಿ ಅವರು ಹೇಳಿದ್ದನ್ನೇ, ಜವಾಬು ಕೊಟ್ಟದ್ದನ್ನೇ, ಲಘುವಾದ ಭಾಷಣದಲ್ಲಿ, ಲಘುವಾದ ರೀತಿಯಲ್ಲಿ ಸರ್ಕಾರ ಮತ್ತು ಆಡಳಿತ ನಡೆಸತಕ್ಕಂಥ ಮಂತ್ರಿಮಂಡಳ ಏನಾದರೂ ಸ್ವಲ್ಪ ನೋಡಿದರೆ, ಇದರಿಂದ ಆಗತಕ್ಕಂಥ ದುಷ್ಪರಿಣಾಮಗಳು ಏನು ಅನ್ನತಕ್ಕಂಥಾದ್ದನ್ನು ಮಾನ್ಯ ಅರ್ಥ ಮಂತ್ರಿಗಳು ಮತ್ತು ಸರ್ಕಾರ ಅರ್ಥ ಮಾಡಿಕೊಳ್ಳಬಹುದು ಎಂದು ನಾನು ಅವರಲ್ಲಿ ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗಾಗಲೇ 300 ಲಕ್ಷದಿಂದ 600 ಚಿಲ್ಲರೆ ಲಕ್ಷ ಖರ್ಚು ಮಾಡಿ, 25 ಸಾವಿರ ಹಳ್ಳಿಗಳಿರತಕ್ಕಂಥ ಮೈಸೂರಿನಲ್ಲಿ ಎಷ್ಟು ಲಕ್ಷ ಜನಕ್ಕೆ ಆರೋಗ್ಯಭಾಗ್ಯ ಕಾಪಾಡುವುದಕ್ಕೆ ಆಸ್ಪತ್ರೆಗಳು, ಔಷಧಿಗಳು, ಡಾಕ್ಟರುಗಳು, ಹೆರಿಗೆ ಮಾಡತಕ್ಕ ಮಿಡ್‌ವೈಫ್‌ಗಳು, ಸೂಲಗಿತ್ತಿಯರು ಮೊದಲಾದುವೆಲ್ಲವನ್ನೂ ಒದಗಿಸಿದೆ ಎನ್ನುವುದನ್ನು ಅಪ್ಪಣೆ ಕೊಡಿಸಿದ್ದಾರೆ, ನನಗೆ ಅನಿಸುತ್ತಿತ್ತು: "ಪರವಾ ಇಲ್ಲ, ಭೇಷ್ ಜತ್ತಿಯವರೆ, ನೀವು ಅರ್ಥ ಮಂತ್ರಿಗಳಾಗಿರುವುದು, ಕೌಟಿಲ್ಯವಿ ಅರ್ಥ ಶಾಸ್ತ್ರವನ್ನು ಕರತಲಾಮಲಕ ಮಾಡಿಕೊಂಡು ಇವತ್ತಿನ ದಿವಸ......"

Mr. SPEAKER.—The Hon'ble Member must address me and not the Finance Minister. I will not allow the Hon'ble Minister to occupy a higher seat than me.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನು ಏತಕ್ಕೆ ಹೇಳುತ್ತಾ ಇದ್ದೇನೆಂದರೆ, ಈ ಸಭೆಯಲ್ಲಿ ಆರೋಗ್ಯದ ಮಸೂದೆ ಮಂಡನೆಗೆ ಬಂದಾಗ, ಆರೋಗ್ಯ ಖಾತೆಗೆ ನಮ್ಮಲ್ಲಿ ಡಾಕ್ಟರಿಲ್ಲ, ಕಾಂಪೌಂಡರುಗಳಿಲ್ಲ, ಟ್ರೇನಿಂಗ್ ಕೊಡುತ್ತೇವೆಂದು ಹೇಳಿದ್ದರಲ್ಲಾ, ಇವತ್ತಿನ ದಿವಸ 490 ಜನ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲವೆಂದು ಹೇಳಿದ ಮೇಲೆ ತಾವು ಕೊಟ್ಟಂಥ, ಕಾಪಾಡಿದಂಥ ಆರೋಗ್ಯಭಾಗ್ಯ ಏನು, ಅಲ್ಲಿನ ಜನಗಳಿಗೆ ಸುಖ ಏನು? ಅಲ್ಲಿನ ಜನತೆಗೆ ಕೊಡಬೇಕಾದ ಕಾರಣ ಏನು ? ಯಾವ ತತ್ವ, ನೀತಿ ಕಟ್ಟುನಿಟ್ಟಾಗಿ ಕಾಪಾಡುವುದಕ್ಕೆ ಇವತ್ತಿನ ದಿವಸ ತಾವು ಹೆಲ್ತ್ ಸೆಸ್ಸನ್ನು ಹಾಕಬೇಕೆಂದು ಹೊರಟಿದ್ದೀರಿ, ಅಪ್ಪಣೆ ಕೊಡಿಸುತ್ತೀರಾ ? ನನ್ನ ಸ್ನೇಹಿತರಾದಂಥ ಎಂ. ಆರ್. ಪಾಟೀಲರು ಹೇಳಿದ್ದು ನಿಜವಾಗಿಯೂ ಕೂಡ ಚಿನ್ನದ ಅಕ್ಷರಗಳಲ್ಲಿ ಬರೆದಿಡಬೇಕು. 100ಕ್ಕೆ 4 ಭಾಗ ವಸೂಲುಮಾಡಿದ ಹಣದಿಂದ, 100ಕ್ಕೆ 70 ಭಾಗ ಆದಾಯ ಇರತಕ್ಕವರಿಗೆ ಖರ್ಚು ಮಾಡುವುದಕ್ಕೋಸ್ಕರ ಇವತ್ತಿನ ದಿವಸ ಭೂಕಂದಾಯದ ಮೇಲೆ ಹೆಲ್ತ್ ಸೆಸ್ಸನ್ನು ಹಾಕಬೇಕೆಂದು ಹೊರಟಿರತಕ್ಕಂಥದ್ದು ಸರಿಯೇ ತಪ್ಪೇ ಎಂದು ಸ್ವಲ್ಪ ಯೋಚನೆಮಾಡಿ ನೋಡಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಜಿಲ್ಲಾ ಹೆಡ್-ಕ್ವಾರ್ಟರುಗಳಲ್ಲಿ, ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ತೆರೆದಿರತಕ್ಕಂಥ ಆಸ್ಪತ್ರೆಗಳಲ್ಲಿ ಎಷ್ಟು ಔಷಧಿ ಇದೆ, ಉಪಕರಣಗಳಿವೆ, ಎಷ್ಟು ಜನರು ಬುದ್ಧಿವಂತರು ಇದ್ದಾರೆಂಬುದನ್ನು ನಮ್ಮ ಗಮನಕ್ಕೆ ತರುತ್ತೀರಾ? ಚೇಳು ಕಡಿದರೆ ಹೆಬ್ಬಟ್ಟು ಕತ್ತರಿಸಿ ಹಾಕಿದಂಥ ಡಾಕ್ಟರುಗಳು ಹಳ್ಳಿಗಾಡಿನಲ್ಲಿ ಇದ್ದು ಆರೋಗ್ಯ ಭಾಗ್ಯ ಕಾಪಾಡಿದ್ದಾರೆ. ಅದಕ್ಕೋಸ್ಕರವಾಗಿ ಸೆಸ್ ಕೊಡಬೇಕು ನಮಗೆ ಖೇದ ಮಾಡತಕ್ಕಂಥ, ಹಿಂಸೆ ಮಾಡತಕ್ಕಂಥ ನಿಮ್ಮ ನೀತಿಯಾದರೂ ಏನು, ನೀವು ಹೊರಟಿರತಕ್ಕ ದಾರಿಯಾದರೂ ಏನು ? ಮಾರಿ ಕಣ್ಣು ಹೋತನ ಮೇಲೆ ಎಂದ ಹಾಗಿದೆ ನಿಮ್ಮ ಇವತ್ತಿನ ದಿವಸದ ನೀತಿ. ಯಾವ ಭಾಗಕ್ಕೆ ತಿರುಗಿ, ಯಾವನು ಭೂಮಿ ಹಿಡಿದಿದ್ದಾನೆಯೋ, ಯಾವನನ್ನು ನೇಗಿಲ ಯೋಗಿ ಎಂದು ಕರೆಯುತ್ತೇವೆಯೋ, ಯಾವನು ಭೂಮಿಯಿಂದ ಜೀವನ ಮಾಡುತ್ತಾನೆಯೋ, ಅವನ ಕಡೆಗೇ ತಿರುಗುತ್ತೀರಿ. ಯಾವನು ಶ್ರಮದಿಂದ ದುಡಿಯುತ್ತಾನೆಯೋ, ಪರಮೋತ್ಕೃಷ್ಟ ಭೂಮಿಯಲ್ಲಿಯೇ ಇದ್ದಾನೆಯೋ, ಯಾವನು ತನ್ನ ಸ್ವಂತ ಜೀತದಿಂದ ಬೆವರು ಸುರಿಸುತ್ತಾನೆಯೋ ಅವನ ಹಣ ಸರ್ಕಾರದ ಖಜಾನೆಗೆ. ಶ್ರೀಮಂತ ಕೊಡತಕ್ಕ ಹಣ, ರೈತ, ಕೂಲಿಗಾರ, ಬಡವ ಕೊಡತಕ್ಕ ಹಣ: ಅಧಿಕಾರಿಗಳು ತೆಗೆದುಕೊಂಡ ಹಣದಿಂದ ಇನ್‌ಕಂಟ್ಯಾಕ್ಸ್ ಕೊಟ್ಟರೆ, ಸೂಪರ್ ಟ್ಯಾಕ್ಸ್ ಕೊಟ್ಟರೆ, ಅದು ಜನಗಳ ದುಡಿಮೆಯಿಂದ ಅವರಿಗೆ ಕೊಟ್ಟಂಥ ಹಣದಿಂದ ಇದನ್ನೆಲ್ಲಾ ತಾವು ಸ್ವಲ್ಪ ಯೋಚನೆ ಮಾಡಿದರೆ, ಯಾವ ದೇಶದಲ್ಲಿ ಬಡತನವೇ ಬಡವರ ಭಾಗ್ಯ ದೇವತೆಯೋ ಯಾರ ಮನೆ ಬಾಗಿಲಿನಲ್ಲಿ ದರಿದ್ರಲಕ್ಷ್ಮಿ ಕೂತಿರುತ್ತಾಳೆಯೋ ಅವನ ಮೇಲೆ, 4 ರೂಪಾಯಿ ಕಂದಾಯ ಕೊಡತಕ್ಕ ರೈತನ ಮೇಲೆ ಆರೋಗ್ಯ ಕಾಪಾಡುವುದಕ್ಕೆ, ಅವನಿಗೋಸ್ಕರ ತೆರಿಗೆ ಹಾಕುತ್ತೇ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವೆಂದು ಹೇಳುತ್ತಿರುವುದು ನಿಜವಾಗಿಯೂ ಹಾಸ್ಯಾಸ್ಪದವಾದೀತು. ತಾವು ಬಹಳ ದೀರ್ಘವಾಗಿ ಯೋಚನೆ ಮಾಡಬೇಕು. ಇದರಿಂದ ಜನತೆಯನ್ನು ಹೀಗೆ ಶೋಷಣೆ ಮಾಡುವುದಕ್ಕೆ ಹೊರಟರೆ, ದೇಶದಲ್ಲಿ ಇಂದಲ್ಲ ನಾಳೆ ಜನ ನಿಮ್ಮ ಮೇಲೆ ತಿರುಗಿ ಬೀಳುತ್ತಾರೆ. ಅದಕ್ಕೋಸ್ಕರ ಹೇಳುತ್ತೇನೆ. ಇಂಥ ಒಂದು ಮಸೂದೆ ತರುವಾಗ ಕೂಲಂಕಷವಾಗಿ ಯೋಚನೆಮಾಡಿ; ಸರಿಯೋ ತಪ್ಪೋ ಎನ್ನುವುದನ್ನು ಯೋಚನೆಮಾಡಿ ಇವತ್ತಿನ ದಿವಸ, ನಿನ್ನೆ ಹೇಳಿದಂಥ ಪ್ರಕರಣದಲ್ಲಿ, ಆರ್ಥಿಕ ಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ, ಉಪಾಯದಿಂದ ಹಾಗೆ ಹೀಗೆ ಮಾತನ್ನು ಜಾರಿಸಿದರು. ಇವತ್ತಿನ ದಿವಸ ನಾನು ಹೇಳತಕ್ಕಾಂಥಾದ್ದರಲ್ಲಿ ಅಸತ್ಯವಿದ್ದರೆ, ಅದು ಸತ್ಯಾಂಶಕ್ಕೆ ದೂರವಿದ್ದರೆ, ತಮ್ಮ ಕೈನಲ್ಲಿ ರಾಜೀನಾಮೆ ಕೊಟ್ಟು ಓಡಿ ಹೋಗುವುದಕ್ಕೆ ಸಿದ್ಧನಿದ್ದೇನೆ. ಶ್ರೀಮಂತರೂ ಇವತ್ತಿನ ದಿವಸ ತೆರಿಗೆ ಕೊಟ್ಟಿದ್ದಾರೆ. ಅಂಥ ಒಬ್ಬ ಶ್ರೀಮಂತರ ಹಣಕಾಸಿನಲ್ಲಿ ಹಿಂದೂಸ್ಥಾನದ ಪ್ರಮುಖವಾದ ಬ್ಯಾಂಕೊಂದರಲ್ಲಿ 70 ಲಕ್ಷ ರೂಪಾಯಿ ಡಿಪಾಜಿಟ್ಟನ್ನು ಫ್ರೀಸ್ ಮಾಡಿದ್ದಾರೆ. ಎಂಟು ದಿವಸಗಳಿಂದ ಹಣಕಾಸಿನ ಮೇಲೆ ಆಪರೇಟ್ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಟ್ಟಿಲ್ಲ.

ಅಂಥವರಮೇಲೆ ಯಾವ ಟ್ಯಾಕ್ಸ್ ಬೇಕಾದರೂ ಹಾಕಿ, ನಾವು ಮನಃಪೂರ್ವಕವಾಗಿ, ಹೃತ್ಪೂರ್ವಕವಾಗಿ ತಮ್ಮ ಸಲಹೆಯನ್ನು ಒಪ್ಪುತ್ತೇವೆ. ಯಾವಾಗಲೂ ಹೊಟ್ಟೆಗಿಲ್ಲದೆ, ಬಟ್ಟೆಗಿಲ್ಲದೆ, ವಾಸಕ್ಕೆ ಯೋಗ್ಯವಾದ ಮನೆಯಿಲ್ಲದೆ ಭೂಮಿಯನ್ನು ಹಿಡಿದು, ಭೂಮಿಯನ್ನು ಅವಲಂಬಿಸಿ ಜೀವನ ಮಾಡತಕ್ಕ ಬಡರೈತನ ಮೇಲೆ ತೆರಿಗೆಯನ್ನು ಹಾಕಬೇಡಿ ಎಂದು ನಾನು ಸರ್ಕಾರದವರನ್ನು ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಿಂದ ಏನಾಗುತ್ತದೆ ಎಂಬುದನ್ನು ಸ್ವಲ್ಪ ಅರ್ಥಮಾಡಿಕೊಳ್ಳಬೇಕಾಗಿದೆ. ಇವೊತ್ತಿನ ದಿವಸ ವಿಕ್ಟೋರಿಯಾ ಆಸ್ಪತ್ರೆಗೆ ಹೋದರೆ, ಬೌರಿಂಗ್ ಆಸ್ಪತ್ರೆಗೆ ಹೋದರೆ, ಲೇಡಿ ಕರ್ಜನ್ ಆಸ್ಪತ್ರೆಗೆ ಹೋದರೆ, ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕ ಮೆಗಾನ್ ಆಸ್ಪತ್ರೆಗೆ ಹೋದರೆ ಅಲ್ಲಿ ಎಷ್ಟರ ಮಟ್ಟಿಗೆ ಸರ್ಕಾರದ ಜನಗಳ ದೃಷ್ಟಿ ಬಡವನ ಕಡೆ ಇದೆ ಯೆಂಬುದು ಗೊತ್ತಾಗುತ್ತದೆ. ಶ್ರೀಮಾನ್ ಜತ್ತಿಯವರಿಂದಲೋ, ಶ್ರೀಮಾನ್ ಕಂಠಿಯವರಿಂದಲೋ ಒಂದು ಪತ್ರವನ್ನು ತಂದಿದ್ದರೆ ಅವರ ಕೆಲಸ ಮುಂಚಿತವಾಗಿ ಸರಿಯಾಗಿ ಆಗುತ್ತದೆ. ಆದರೆ, ಒಬ್ಬ ಬಡವ 8-10 ದಿವಸಗಳು ಕಾದು ಕುಳಿತರೂ ಕೂಡ ಕ್ಷಯ ರೋಗದ ಆಸ್ಪತ್ರೆಯಲ್ಲಿ ಅವನಿಗೆ ಪ್ರವೇಶ ಸಿಕ್ಕುವುದಿಲ್ಲ. ಹೀಗಿರುವಾಗ ಯಾರ ಉದ್ಧಾರಕ್ಕಾಗಿ, ಯಾರ ಆರೋಗ್ಯವನ್ನು ಕಾಪಾಡುವುದಕ್ಕೋಸ್ಕರ ಜನಗಳ ಮೇಲೆ ತೆರಿಗೆಯನ್ನು ವಿಧಿಸುತ್ತಿರುವರೆಂಬುದನ್ನು ಅಪ್ಪಣೆ ಕೊಡಿಸಬೇಕೆಂದು ನಾನು ಸರ್ಕಾರದವರನ್ನು ಅಧ್ಯಕ್ಷರ ಮೂಲಕ ಕೇಳುತ್ತೇನೆ. ಹುಣಿಸೆ ಬೀಜದ ಮೇಲೆ, ಕೊತ್ತಂಬರಿ ಬೀಜದ ಮೇಲೆ, ಹೆಣ್ಣುಮಕ್ಕಳು ಹಾಕಿಕೊಳ್ಳತಕ್ಕಂಥ ಬಣ್ಣದ ಮೇಲೆ, ಹಣೆಗೆ ಹಚ್ಚಿಕೊಳ್ಳತಕ್ಕ ಕುಂಕುಮದ ಮೇಲೆ, ಕರಿಮಣಿಯ ಮೇಲೆ ಸುಂಕವನ್ನು ಹಾಕಿದ್ದಾರೆ. ಯಾರ ಮೇಲೆ ಸುಂಕ ಹಾಕೋಣವೆಂದು ಸುತ್ತಲೂ ತಿರುಗಿ ನೋಡಿ, ಯಾರೂ ಕಣ್ಣಿಗೆ ಕಾಣದಿದ್ದರೆ ಬಡವನ ಮೇಲೆ ಸುಂಕ ಹಾಕಿ ಎಂದು ಅವನ ಮೇಲೆ ಬೆಟ್ಟು ತೋರಿಸಿದ್ದಾರೆ. ಇದು ಸರಿಯಲ್ಲ ಎಂದು ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸಾಮಾನ್ಯ ಜನತೆಯ ಮೇಲೆ ಸುಂಕವನ್ನು ಹಾಕುವಾಗ ಆ ಭಾಗವಾಗಲೀ, ಈ ಭಾಗವಾಗಲೀ, ಎಲ್ಲಾ ಜನತೆಗೂ ಒಂದೇ ತರಹ ಸುಂಕ ಇರಬೇಕು. ಕೆಲವರು ಮೈಸೂರಿನಲ್ಲಿ ಸುಂಕ ಕಡಿಮೆ ಇದೆ. ಆದ್ದರಿಂದ ಮೈಸೂರಿನ ಜನತೆಯ ಮೇಲೆ ಮಾತ್ರ ಸುಂಕವನ್ನು ಹಾಕಿ ಎಂದು ಹೇಳಿದರು. ಇಂಥಾ ಭಾವನೆಯನ್ನು ನಾನು ಒಪ್ಪುವುದಿಲ್ಲ. ಇತರ ಭಾಗಗಳ ಜನಗಳ ಮೇಲೂ ಕೂಡ ಮೈಸೂರಿನಲ್ಲಿ ಏನಿದೆಯೋ ಆ ಮಟ್ಟಕ್ಕೆ ಏರಿಸಿ, ಇಲ್ಲದೆ ಹೋದರೆ ಮೈಸೂರಿನಲ್ಲಿ ಬರತಕ್ಕ ಆದಾಯ ಒಂದು ವೇಳೆ ಕಡಿಮೆ ಇದ್ದರೆ ಹೆಚ್ಚಿಗೆ ಸುಂಕವನ್ನು ಹಾಕುವುದನ್ನೇ ತೆಗೆದುಹಾಕಿ. ಅದನ್ನು ಬಿಟ್ಟು 3 ನಯಾಪೈಸೆಯಿಂದ 6 ನಯಾಪೈಸೆಗೆ ಸುಂಕವನ್ನು ಏರಿಸುತ್ತೇವೆ, ಅದರಿಂದ 40 ಲಕ್ಷ ರೂಪಾಯಿ ದುಡ್ಡು ಬರುತ್ತದೆ ಎಂದು ಹೇಳಿದರೆ ಇದು ಯಾವ ಧರ್ಮ? ಇದು ಯಾವ ನೀತಿ ಎಂದು ನಾನು ಕೇಳುತ್ತೇನೆ. ಈಗ ಸರಿಯಾದಂಥ ರೀತಿಯಲ್ಲಿ ಈ ಮಸೂದೆಯನ್ನು ಈ ಸಭೆಯ ಮುಂದೆ ತಂದಿಲ್ಲ. ಮೈಸೂರಿನ ಜನತೆಗೆ ಇರತಕ್ಕ ಹೆಲ್ತ್ ಸೆಸ್ಸ್ ತೆಗೆದು ಅದರಿಂದ ಬರತಕ್ಕ ಎರಡು ಕೋಟಿ 30 ಲಕ್ಷ ರೂಪಾಯಿಗಳನ್ನು ಮೈಸೂರು ಸರ್ಕಾರದ ಆಬ್ಲಿಗೇಟರಿ ಡ್ಯೂಟಿಗೋಸ್ಕರವೆಂದು ತಾವು ಮಾಡಬೇಕಾಗಿತ್ತು. ಆಬ್ಲಿಗೇಟರಿ ಡ್ಯೂಟಿ ಸರ್ವೀಸ್ ಇದ್ದರೆ ಅದನ್ನು ಮಾಡಿ. ಯಾವಾಗಲೂ ಶ್ರೀಮಂತರ ಸೌಲತ್ತಿನ ಕಡೆ ನೋಡಬೇಡಿ ಎಂದು ನಾನು ಹೇಳುತ್ತಾ ಇದ್ದೇನೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು, ಅಧಿಕಾರಿಗಳು ಸೆಸ್ಸು ಕೊಡುತ್ತಾರೆ, ಅಧಿಕಾರಿಗಳು ಹಣವನ್ನು ಕದಿಯುವುದಿಲ್ಲ ಅಧಿಕಾರಿಗಳಿಗೆ ಸಂಬಳವೇನೂ ಜಾಸ್ತಿಯಾಗುವುದಿಲ್ಲವೆಂದು. ಅಧಿಕಾರಿಗಳ ಬಾಯಲ್ಲಿ ಬರುವುದೆಲ್ಲಾ ಮುತ್ತು ರತ್ನವೆಂದು ಸರ್ಕಾರದವರು ತಿಳಿದಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ಯೋಜನೆಗಳಾಗಬೇಕು, ಕಾಲುವೆ ಕಟ್ಟಬೇಕು, ಸೇತುವೆ ಮಾಡಬೇಕು ಮತ್ತು ಉಪಾಧ್ಯಾಯರುಗಳನ್ನು ನೇಮಿಸಬೇಕೆಂದು ಮೊನ್ನೆತಾನೆ ಕಳೆದ ತಿಂಗಳು 27ನೇ ತಾರೀಕು 6 ಕೋಟಿ ರೂಪಾಯಿಗಳ ಸಾಲವನ್ನು ಎತ್ತಿದರು. ನಮ್ಮ ಸಂಸ್ಥಾನದ ಬಾರೋಯಿಂಗ್ ಕ್ಯಪಾಸಿಟಿ ಏನು? ಜನ ಎಷ್ಟು ಸುಂಕವನ್ನು ಕೊಡಬಲ್ಲರು ಎನ್ನುವುದನ್ನು ರಿಜರ್ವ್ ಬ್ಯಾಂಕಿನವರು ಅಪ್ಪಣೆ ಕೊಡಿಸಿದರು ಮತ್ತು ಕೇಂದ್ರಸರ್ಕಾರದವರು ಅಪ್ಪಣೆ ಕೊಡಿಸಿದರು. ಈಗತಾನೆ ನನ್ನ ಸ್ನೇಹಿತರೊಬ್ಬರು ಹೇಳಿದರು. ಮೈಸೂರು ಸರ್ಕಾರ ಅದರಮೇಲೆ ಡಿಲ್ಲಿ ಸರ್ಕಾರ ಇದೆ. ಆ ಸರ್ಕಾರವಾಗಲೀ ಈ ಸರ್ಕಾರವಾಗಲೀ ಈ ರೀತಿ ಬಡಜನಗಳ ಮೇಲೆ ಸುಂಕವನ್ನು ಹಾಕಬೇಡಿ ಎಂದು. ನಿಮ್ಮ ಯೋಜನೆಯನ್ನು ನೀವು ಕಾರ್ಯಗತ ಮಾಡಬೇಕಾದರೆ, ಅದಕ್ಕೆ ನಮ್ಮೆಲ್ಲರ ಸಹಕಾರ ಬೇಕಾದರೆ ಬಡವರನ್ನು ಒತ್ತಟ್ಟಿಗೆ ಇಟ್ಟುಬಿಡಿ. ಬೆಂಗಳೂರು ಸಿಟಿಯಲ್ಲಿ ನಾನು ಹೇಳಿದಂಥ ಪ್ರಕರಣಗಳನ್ನು ನಡೆಸಿದಂಥವರು ಇನ್ನೂ 21 ಜನ ಇದ್ದಾರೆ. ಅವರ ಹೆಸರುಗಳನ್ನು ಬೇಕಾದರೆ ಮಾನ್ಯ ಆರ್ಥಿಕ ಮಂತ್ರಿಗಳಿಗೆ ಹೇಳುತ್ತೇನೆ. ಅವರು ನನ್ನನ್ನು ಕೈಬಿಡುವುದಿಲ್ಲ, ನನ್ನ ಹೆಸರನ್ನು ಹೊರಗಡೆ ಬಿಟ್ಟುಬಿಡುವುದಿಲ್ಲವೆಂದು ಹೇಳಿದರೆ ಅವರ ಹೆಸರನ್ನು ನಾನು ಹೇಳುತ್ತೇನೆ. ಅತಿ ಶೀಘ್ರವಾಗಿ ಮುಂದ್ರಾ ವ್ಯವಹಾರವನ್ನು 21 ಜನ ನಡೆಸಿದ್ದಾರೆ. 21 ಜನ ಮೈಸೂರು ಸರ್ಕಾ

ರಕ್ಕೆ ಕೊಡತಕ್ಕ ಲಕ್ಷಾಂತರ ರೂಪಾಯಿಗಳ ಟ್ಯಾಕ್ಸನ್ನು ಕೊಡದೆ ಹಾಗೆಯೇ ಕೂತಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದವರು ಇಟ್ಟಿರುವಂಥಾ ಸ್ಕ್ವಾಡ್ ಇಟ್ಟು, ಅಂಥಾ ಒಂದು ಕಾನೂನು ಮಾಡಿ ಆ 21 ಜನಗಳ ಮನೆಗಳನ್ನು ಜಫ್ತಿ ಮಾಡಿ ಅವರನ್ನು ಹಿಡಿದು ತನಿಖೆ ಮಾಡಿ. ಆದರೆ ಬಡವರ ಮೇಲೆ ಕೈತೋರಿಸಬೇಡಿ ಎಂದು ನಾನು ಸರ್ಕಾರದವರನ್ನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ. ಈ ಮಸೂದೆಯನ್ನು ಸ್ವಲ್ಪ ಕಾಲ ತಡೆದು ಹಿಡಿಯಿರಿ. ಇದನ್ನು ಪಾಸು ಮಾಡಬೇಡಿರಿ. ಇದನ್ನು ಪಾಸು ಮಾಡಿದ್ದೇ ಆದರೆ ಇದರಿಂದ ಅಪಘಾತವಾಗುತ್ತದೆ. ಇದರಿಂದ ಒಳ್ಳೆಯದಾಗುವುದಿಲ್ಲ. 40 ಲಕ್ಷ ರೂಪಾಯಿಗಳನ್ನು ಬೇಕಾದರೆ ಬೇರೆ ರೀತಿಯಿಂದ ಸಂಪಾದನೆ ಮಾಡಿಕೊಳ್ಳಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ಈಗ ನಮ್ಮ ಮುಂದೆ ಇಟ್ಟಿರತಕ್ಕ ಎರಡನೇ ಹಣಕಾಸಿನ ಮಸೂದೆ ಏನಿದೆ-ಮೈಸೂರು ಹೆಲ್ತ್ ಸೆಸ್ ಬಿಲ್ 1962-ಈ ಮಸೂದೆಯನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಸರ್ಕಾರ ಮಾಡಿದ್ದನ್ನೇ ಮಾಡುತ್ತಾ ಹೋದರೆ ನಾವು ಪದೇ ಪದೇ ಹೇಳಿದ್ದನ್ನೇ ಹೇಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಸಚಿವರು ಮಾಡಿದಂಥಾ ವರದಿಯಲ್ಲಿ ಅಂಥಾ ವಿಶೇಷವಾದ ಅಂಶಗಳಾವುವೂ ಇರಲಿಲ್ಲ. ಉತ್ತರ ಕೊಡತಕ್ಕಂಥಾ ಸಂದರ್ಭದಲ್ಲಿ ಸಾಮಾನ್ಯವಾದ ಒಂದು ವರದಿಯನ್ನು ಮಾಡಬೇಕು ಎಂದು ಹೇಳಿ ಅವರು ಮಾಡಿದ್ದಾರೆ. ಉತ್ತರದಲ್ಲಿ ಯಾವ ರೀತಿಯಾದ, ಯಾರಾದರೂ ನಂಬಬಹುದಾದ, ಮತ್ತು ಯಾರಿಗಾದರೂ ಸಮಾಧಾನವನ್ನುಂಟು ಮಾಡತಕ್ಕ ಉತ್ತರವನ್ನು ಮಂತ್ರಿಗಳು ಕೊಡುತ್ತಾ ಇಲ್ಲ. ಈಗಾಗಲೇ ನಾವು ಮಂಜೂರು ಮಾಡಿರತಕ್ಕ ಮಸೂದೆಯ ಬಗ್ಗೆ ಅವರು ಹೇಳಿದ್ದನ್ನೂ ನಾವು ಕೇಳಿದ್ದೇವೆ. ಈ ಮಸೂದೆಯ ವಿಷಯದಲ್ಲಿ ದೇಶದ ಆರ್ಥಿಕ ಸ್ಥಿತಿಯನ್ನು ನಾವು ಸ್ವಲ್ಪ ಗಣನೆಗೆ ತೆಗೆದುಕೊಂಡರೆ ನಮಗೆ ಇಂದಿನ ಸನ್ನಿವೇಶ ಅರ್ಥವಾದೀತು. ಕೇಂದ್ರ ಸರ್ಕಾರದವರು ತಮ್ಮ ಖರ್ಚನ್ನು ಸರಿದೂಗಿಸುವುದಕ್ಕಾಗಿ ಪಂಚವಾರ್ಷಿಕ ಯೋಜನೆಗಳ ಹೆಸರಿನಲ್ಲಿ ಪರದೇಶದ ಸರ್ಕಾರಗಳ ಎದುರು ಕೈ ಚಾಚುತ್ತಾರೆ. ಅಮೇರಿಕಾ, ಇಂಗ್ಲೆಂಡ್, ಜರ್ಮನಿ, ಮತ್ತು ರಷ್ಯಾ ಮುಂತಾದ ಪರದೇಶದ ಸರ್ಕಾರಗಳ ಎದುರು ಇವರು ತಮ್ಮ ಭಿಕ್ಷಾ ಪಾತ್ರೆಯನ್ನು ಕೈಚಾಚಿ ಹಿಡಿಯುತ್ತಾರೆ. ರಾಜ್ಯ ಸರ್ಕಾರಗಳು ತಮ್ಮ ಯೋಜನೆಗಳನ್ನ ನಡೆಸಿಕೊಂಡು ಹೋಗಬೇಕೆಂದು ಕೇಂದ್ರ ಸರ್ಕಾರದ ಕಡೆ ಇವರು ತಮ್ಮ ಭಿಕ್ಷಾಪಾತ್ರೆಯನ್ನು ಹಿಡಿಯುತ್ತಾರೆ. ಎಲ್ಲಕ್ಕೂ ಮೂಲವಾಗಿರತಕ್ಕ ಸ್ಥಳೀಯ ಸಂಸ್ಥೆಗಳು ಎಲ್ಲರ ಕಡೆಗೂ ಭಿಕ್ಷಾಪಾತ್ರೆಯನ್ನು ಹಿಡಿಯುತ್ತವೆ. ಮುನಿಸಿಪಾಲಿಟಿಗಳು, ಗ್ರಾಮಪಂಚಾಯಿತಿಗಳು ಸಹ ನಾವು ಯೋಜನೆಗಳನ್ನು ಮಾಡಬೇಕಾಗಿದೆ, ಅನೇಕ ಕಾರ್ಯಗಳನ್ನು ಮಾಡಬೇಕಾಗಿದೆ ಅದಕ್ಕೋಸ್ಕರ ನಮಗೆ ಹಣವನ್ನು ಕೊಡಿ ಎಂದು ಸರ್ಕಾರದವರನ್ನು ಕೇಳುತ್ತಿದ್ದಾರೆ. ಈ ಮೂರನ್ನೂ ನೋಡಿದರೆ ಅನೇಕ ಭಿಕ್ಷುಕರು ಒಂದು ಕಡೆ ಸೇರಿದಂತೆ ಕಾಣುತ್ತದೆ. ಹೀಗೆ ಕೇಂದ್ರಸರ್ಕಾರದವರು ಪರದೇಶದ ಸರ್ಕಾರದವರ ಕಡೆ, ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದವರ ಕಡೆ ಭಿಕ್ಷಾಪಾತ್ರೆಯನ್ನು ಹಿಡಿಯುತ್ತಾರೆ. ಈ ಮಸೂದೆಯನ್ನು ನಮ್ಮ ಮಾನ್ಯ ಸ್ನೇಹಿತರೆಲ್ಲರೂ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆಂದು ಕಾಣುತ್ತದೆ. ಇದರಲ್ಲಿ ನಮ್ಮ ಸರ್ಕಾರದವರು ಬಹಳ ಬುದ್ಧಿವಂತಿಕೆಯಿಂದ ಭಿಕ್ಷಾಪಾತ್ರೆಯನ್ನು ಬೇರೆ ರೀತಿಯಲ್ಲಿ ಹಿಡಿಯುತ್ತಿದ್ದಾರೆ. ಅನೇಕ ಹೊಸ ತೆರಿಗೆಗಳನ್ನು ಹಾಕತಕ್ಕಂಥ ಅಥವಾ ಇರುವ ತೆರಿಗೆಗಳನ್ನು ಇನ್ನೂ ಹೆಚ್ಚಿಸಬೇಕು ಎನ್ನತಕ್ಕ ನೈತಿಕ ಧೈರ್ಯ, ಬಲ, ಸರ್ಕಾರಕ್ಕಿಲ್ಲ ಎನ್ನುವುದು ಸ್ವಯಂ ಸ್ಪಷ್ಟವಾಗಿದೆ. ಕೇಂದ್ರಸರ್ಕಾರದವರು ಕೊಡತಕ್ಕಂಥ ಒಂದು ಹೆಚ್ಚಿನ ಸಾಲ ಸೌಲಭ್ಯದ ಜೊತೆಗೆ ಈಗ ಕೆಲವು ಸುಂಕಗಳನ್ನು ಹಾಕಿ ಇವುಗಳಿಂದಲೇ 42 ಕೋಟಿ ರೂಪಾಯಿಗಳನ್ನು ಪಡೆದುಕೊಳ್ಳಬೇಕು ಎನ್ನುವ ಹಂಚಿಕೆ ನಡೆದಿದೆ.

ಇದು ಮೈಸೂರು ರಾಜ್ಯಕ್ಕೆ ಮಾತ್ರ ಅನ್ವಯಿಸತಕ್ಕ ಮಾತಲ್ಲ. ತೆರಿಗೆಗಳನ್ನು ಹಾಕುವುದಕ್ಕೆ ವಿರೋಧವು ಎಲ್ಲ ಕಡೆಯೂ, ಎಲ್ಲ ವರ್ತುಲಗಳಲ್ಲಿಯೂ ಬರುತ್ತದೆ. ಇಂಥ ಸಂದಿಗ್ಧ ಸಂದರ್ಭದಲ್ಲಿ ಆರ್ಥಿಕವಾಗಿ ಎಲ್ಲ ರಾಜ್ಯಗಳೂ ಈ ಯೋಜನೆಗಳಿಂದಾಗಿ ಈಹೊತ್ತು Commit ಮಾಡಿಕೊಂಡಿವೆ ಎಂದ ಹೇಳಬಹುದು. ಅದರಲ್ಲಿ ನಮ್ಮ ರಾಜ್ಯದಲ್ಲಿ ಅನೇಕ ಭಾಗಗಳು ಬಂದಿರುವುದು ಒಂದು ರೀತಿಯಲ್ಲಿ ಸರ್ಕಾರಕ್ಕೆ ಬಹಳ ಅನುಕೂಲಸಿಂಧು ವಾದವಾಗಿದೆ. ಏನಾದರೂ ತೆರಿಗೆಯನ್ನು ಹೆಚ್ಚಿಸುವುದಾದರೆ ಮೈಸೂರಿನಲ್ಲಿ ಇದ್ದು, ಇತರ ಕಡೆಗಳಲ್ಲಿಲ್ಲದೇ ಹೋದರೆ, ಅಲ್ಲಿ ಇದೆ, ಇಲ್ಲಿಯೂ ಹಾಕುತ್ತೇವೆಂದು ಹೇಳುತ್ತಾರೆ. ಕಡಮೆ ಮಾಡಬೇಕಾದಾಗ ಮಾತ್ರ ಇಂಥ ಆದರ್ಶವಿಲ್ಲ. ಇಂಥ ಒಂದು ಆದರ್ಶ ಸರ್ಕಾರದ ಮುಂದೆ ಇಲ್ಲ. ಯಾವುದೋ ಒಂದು ತೆರಿಗೆ ಇದ್ದು ಹೊರಗಡೆಯಿಂದ ಬಂದ ಜಾಗದಲ್ಲಿಲ್ಲದೆ ಇದ್ದರೆ ಆ ತೆರಿಗೆಯನ್ನು ಅಲ್ಲಿ ಹಾಕುವುದಕ್ಕೆ ಇವರಿಗೆ ಬಹಳ ಚೆನ್ನಾಗಿ ಬರುತ್ತದೆ. ಶ್ರೀಮಾನ್ ಜತ್ತಿಯವರು ನನ್ನ ಮಾತನ್ನು ಕೇಳಿ ನಗುತ್ತಿದ್ದಾರೆ. ಸರ್ಕಾರದವರು ಇಂಥ ಮಸೂದೆಗಳನ್ನು ತಂದು ತೆರಿಗೆ ಹಾಕುತ್ತಿದ್ದಾರೆ. ಅನಾದಿಯಿಂದ ಸರ್ಕಾರದಿಂದ ಹಾಕತಕ್ಕ ತೆರಿಗೆಯೆಲ್ಲ ರಾಜದಂಡ, ಒಂದು ಶಿಕ್ಷೆಯ ರೂಪದಲ್ಲಿ ಹಾಕುವಂಥಾದ್ದು. ಸಮಾಜವಾದವನ್ನು ಆದರ್ಶವಾಗಿಟ್ಟುಕೊಂಡಿರುವುದರಿಂದ ಸಾಮಾನ್ಯ ಜನತೆಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕು ಎನ್ನುವುದು ನಮ್ಮ ಧ್ಯೇಯವಾಗಿರುತ್ತದೆ. ಈ ಧ್ಯೇಯ ಸಾಧನೆಗೆ ಹಳೆಯ ಕಾಲದ ಕಂದಾಚಾರದ ಮಧ್ಯಯುಗದ ತೆರಿಗೆ ಕ್ರಮಗಳನ್ನು ಈ ಸರ್ಕಾರ ಅನುಸರಿಸುತ್ತಿದೆ. ಮಧ್ಯಕಾಲದಲ್ಲಿ, ಹಳ್ಳಿಗಳಲ್ಲಿ ಕಂದಾಯಗಳು ಹೊಸದಾಗಿ ಬಂದಾಗ, ಬರೀ ಭೂಕಂದಾಯದಿಂದ ದಿವಾನರ ಸಂಬಳವಾಗುತ್ತಿದ್ದ ಕಾಲದಲ್ಲಿ railway cess, education cess ಇಂಥವನ್ನೆಲ್ಲ ಹಾಕುತ್ತಿದ್ದರು. ಇಂಥ ಸೆಸ್‌ಗಳಿಂದ ಹಣವನ್ನು ಪಡೆಯತಕ್ಕ ಕ್ರಮ ಸಮಾಜವಾದೀ ಆರ್ಥಿಕ ಪದ್ಧತಿಯಲ್ಲಿ ನಾನು ಎಲ್ಲಿಯೂ ನೋಡಿಲ್ಲ. ಬಹುಶಃ ಇದು ಒಂದು transitory period ಎಂದು ಹೇಳಬಹುದು. ನಾವು ಸರಂಜಾಮು ಪದ್ಧತಿ, feudal ಪದ್ಧತಿಯಿಂದ ಸಮಾಜವಾದ ಪದ್ಧತಿಗೆ ದಾಟುತ್ತ ಇರುವಾಗ ಈ ತರಹ ಉಪಾಯಗಳನ್ನು ಬಳಸುತ್ತಿದ್ದೇವೆಂದು ಕುಂಟುವಾದವನ್ನು ಮುಂದೆ ಇಡಬಹುದು. ಸಮಾಜವಾದದ ಆದರ್ಶದೊಳಗೆ ಇಂಥ ಕಿರುಕುಳದ ತೆರಿಗೆಗಳನ್ನು ಹಾಕಿ ದೇಶವನ್ನು ಅಭಿವೃದ್ಧಿ ದಿಸೆಗೆ ತೆಗೆದುಕೊಂಡು ಹೋಗುತ್ತೇನೆನ್ನುವುದನ್ನು ಆರ್ಥಿಕ ತಜ್ಞರೂ ಕೂಡ ಹೇಳಿಲ್ಲ, ಯಾವ ಪುಸ್ತಕದಲ್ಲಿಯೂ ಓದಿಲ್ಲ, ಯಾರ ಬಾಯಲ್ಲಿಯೂ ಕೇಳಿಲ್ಲ. ಶ್ರೀಮಾನ್ ಜತ್ತಿಯವರು ಒಂದು ವಿಷಯವನ್ನು ಹೇಳಿದರು. ನಾವು ಮಾಡುವ ವಿರೋಧವೆಲ್ಲ

(ಶ್ರೀ ಎಸ್. ಗೋಪಾಲಗೌಡ)

ಸಾಮಾನ್ಯವಾದುವು. ಶ್ರೀಮಾನ್ ಶಿವಪ್ಪನವರು in his usual way ಹೇಳಿದ್ದಾರೆ. ರಾಜಕೀಯವಾಗಿ ವಿರೋಧ ಮಾಡಿದರು ಎಂಬುದಾಗಿ ಹೇಳಿದರು, ನಾವು ಕಳ್ಳರನ್ನು ಹಿಡಿಯುವಂಥ ಸಮಿತಿಯನ್ನು ರಚನೆ ಮಾಡುತ್ತೇವೆಂದು ಇನ್ನೊಂದು ಕಳ್ಳರ ಸಮಿತಿಯನ್ನು ಕಳ್ಳರನ್ನು ಹಿಡಿಯುವುದಕ್ಕೆಂದು ರಚನೆ ಮಾಡುತ್ತಿದ್ದಾರೆ. ನನ್ನ ಸ್ವಂತ ಅನುಭವಕ್ಕೆ ಬಂದಿರುವುದನ್ನು ಹೇಳುತ್ತಿದ್ದೇನೆ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರ ದೃಷ್ಟಿಯಲ್ಲಿ ಎಲ್ಲರೂ ಕಳ್ಳರೇ ಎಂದು ಕಾಣುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಕಳ್ಳರು ಎಂದು ಲೋಕಕ್ಕೇ ಗೊತ್ತಿರುವವರನ್ನು ಜವಾಬ್ದಾರಿ ಜನ ಎಂದು ಸರ್ಕಾರ ಬಹಳ ಸಮಿತಿಗಳಲ್ಲಿ ಹಾಕುತ್ತದಲ್ಲ, ಅದನ್ನು ಸರ್ಕಾರ ಕಣ್ಣು ಮುಚ್ಚಿಕೊಂಡು ಹಾಕುತ್ತದೆಂದು ತಿಳಿದಿಲ್ಲ. ಅವರನ್ನು ಬಲಗೊಳಿಸುವ ಉದ್ದೇಶವಿರುವುದರಿಂದಲೇ ಅಂಥ ಕಳ್ಳರನ್ನೆಲ್ಲಾ ದೊಡ್ಡ ಸ್ಥಾನದಲ್ಲಿ, ಈ ದೇಶದಲ್ಲಿಟ್ಟಿದ್ದಾರೆ. ಯಾರನ್ನು ಜನ ಗಲ್ಲಿಗೆ ಹಾಕಬೇಕಾಗಿತ್ತೋ ಯಾರನ್ನು ಗುಂಡಿಕ್ಕಿ ಕೊಲ್ಲ ಬೇಕಾಗಿತ್ತೋ, ಅಂಥವರು ಕ್ರಾಂತಿಯಾದ ಮೇಲೆ ರಾಜ್ಯವನ್ನು ಆಳುತ್ತಿದ್ದಾರೆ, ರಾಜ್ಯದ ಬೊಕ್ಕಸದಿಂದ ಪ್ರತಿಫಲವನ್ನು ಪಡೆಯುತ್ತಿದ್ದಾರೆ, legal ಆಗಿ ಪಡೆಯುತ್ತಿದ್ದಾರೆ. ಕಬ್ಬಿಣ ಸಿಮೆಂಟ್ ಇವುಗಳನ್ನು ಮಾರಾಟಮಾಡುವ ಲೈಸೆನ್ಸ್ ಇರುವವರಿಗೆ ಇಂಥವರಿಗೆ ಬೇಕಾದಷ್ಟು ರಕ್ಷಣೆ ಕೊಟ್ಟಿದ್ದಾರೆ, ಸಾಮಾನ್ಯ ಜನರಿಗೆ ಏನೂ ಇಲ್ಲ. ತಮಗೆ ವೋಟು ಕೊಟ್ಟನಂತರ ಅವರು ದೂರ.

Mr. SPEAKER.—The Hon'ble Member must come to the Bill rather than speaking on extraneous matters which could be discussed on other occasions.

ಶ್ರೀ ಎಸ್. ಗೋಪಾಲಗೌಡ.—Thank you, Sir, ಸರ್ಕಾರದವರ ತೆರಿಗೆ ಹಾಕುವುದರ ಹಿಂದೆ ಇರತಕ್ಕ ನೀತಿಯನ್ನು ಪ್ರಶ್ನೆಮಾಡುವುದಾದರೆ ಇದು ನೀತಿಯಿಲ್ಲದ, ಒಂದು ಸಂದಿಗ್ಧ ಪರಿಸ್ಥಿತಿಯನ್ನು ದಾಟಿಕೊಳ್ಳುವುದಕ್ಕೆ ಹುಡುಕಿರತಕ್ಕ ತಾತ್ಕಾಲಿಕವಾದ ಉಪಶಮನಗಳು ಅಥವಾ ಉಪಾಯಗಳು ಎಂದು ಹೇಳಬಹುದೇ ಹೊರತು ಇದನ್ನು ಬೇರೆ ಯಾವುದೇ ದೃಷ್ಟಿಯಿಂದ ನೋಡಿ, ಈ ತೆರಿಗೆಗಳಿಗೆ ಇಲ್ಲಿ ಬೆಂಬಲ ನೀಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಳೆಯ ಮೈಸೂರಿನಲ್ಲಿ ಅರ್ಧಾಣೆ ತೆರಿಗೆಯನ್ನು ಕೊಡುತ್ತಿದ್ದರು, ಇದನ್ನು ಎಲ್ಲಕಡೆಗಳಲ್ಲಿಯೂ ಹಾಕಬೇಕಾಗಿದೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಈಗಾಗಲೇ ಭೂಮಿಯ ಕಂದಾಯದ ಮೇಲೆ ಸರ್‌ಚಾರ್ಜ್ ಹಾಕಿದ್ದಾರೆ ಮತ್ತು ಸರ್ವೆ ಸೆಟಲ್‌ಮೆಂಟ್ ಆದ ಮೇಲೆ ಹೆಚ್ಚಿನ ಕಂದಾಯ ಭೂಮಿಯಮೇಲೆ ಬೀಳುತ್ತದೆ. ಭೂಮಿಯ ಮೇಲೆ ಕಂದಾಯವನ್ನು ಹಾಕುವುದು ಸರಂಜಾಮು ಶಾಹಿ ಪದ್ಧತಿಗೆ ಸಂಬಂಧಪಟ್ಟದ್ದು. ಕೆಲವು ಎಕರೆ ಖರಾಬು ಭೂಮಿಯನ್ನು ಇಟ್ಟುಕೊಂಡು 20 ರೂಪಾಯಿ ಕಂದಾಯ ಕೊಟ್ಟು ಭೂಮಿಯನ್ನು ಉಳಿಸಿಕೊಳ್ಳಬೇಕು ಎಂದು ಇತ್ತು. ಏಂದರೆ ಹಿಂದಿನಕಾಲದಲ್ಲಿ ಪಟೇಲರನ್ನು ತೆಗೆದುಕೊಳ್ಳಬೇಕಾದರೆ ನಿನಗೆ ಖಾತೆ ಇದೆಯೇ ಎಂದು ಕೇಳುತ್ತಿದ್ದರು. ಆವನು ಯಾರದೋ ಕೈಕಾಲು ಹಿಡಿದು ನಾಲ್ಕು ಎಕರೆ ಖುಷ್ಕಿ ಜಮೀನನ್ನು ಪಡೆದು ತನ್ನ ಹೆಸರಿಗೆ ಖಾತೆ ಆದಾಗ, ಅದರಿಂದ ಆದಾಯವೇನೇ ಇರಲಿ ಪಟೇಲಿ ಕೆಲಸದಿಂದ ಪೋಟಿಗೆ ಯಾದರೂ ಸಿಕ್ಕುತ್ತದೆಂದು ಖಾತೆದಾರ ಎನ್ನಿಸಿಕೊಂಡು ಇರುತ್ತಿದ್ದರು ; ಇಂಥ ಜನ ನಮ್ಮ ದೇಶದಲ್ಲಿ ಬಹಳವಾಗಿದ್ದಾರೆ. ಈಚೆಗೆ ನಮ್ಮ ದೇಶದ ಪ್ರಧಾನ ಮಂತ್ರಿಯವರು ಭೂಕಂದಾಯ ವಿಧಿಸುವುದರ ಬಗ್ಗೆ ಹೇಳಿದ್ದಾರೆ. ಉತ್ತರ ಪ್ರದೇಶ ಸರ್ಕಾರಕ್ಕೆ ಸಂಬಂಧಪಟ್ಟ ಹಾಗೆ uneconomic holdings, ಅನಾರ್ಥಿಕವಾದ ಹಿಡುವಳಿಯ ಮೇಲೆ ಯಾವ ರೀತಿ ಕಂದಾಯ ಹಾಕಬಹುದು ಎಂದು ಹೇಳಿದ್ದಾರೆ, ಸೋಷಿಯಲಿಸ್ಟ್ ಪಕ್ಷದ ನಿಲುವು ಅನಾರ್ಥಿಕವಾದ ಹಿಡುವಳಿಗಳ ಮೇಲೆ ಯಾವುದೇ ತರಹ ಕಂದಾಯವಿರಬಾರದು. ಇದು ದೇಶದ ಮುಂದೆ ಇರತಕ್ಕ ದೊಡ್ಡ ಬೇಡಿಕೆ.

ಎಲ್ಲ ತರಹ ಕಂದಾಯಗಳ ಮೇಲೂ 12 ನಯೇ ಪೈಸೆ ಸೆಸ್ಸ್ ಹಾಕುತ್ತಾರೆ. 15 ನಯೇ ಪೈಸೆ ಮಾಡುವುದಕ್ಕೆ ಭಯ, ಹತ್ತು ನಯೇ ಪೈಸೆ ಮಾಡುವುದಕ್ಕಿಲ್ಲ, ಹೀಗಾಗಿ 12 ನಯೇ ಪೈಸೆ ಮಾಡಿದ್ದಾರೆ.

> "at the rate of twelve naye Paise in the rupee on all items of land revenue".

ಎಂದು ಹೇಳಿದ್ದಾರೆ, ಆದುದರಿಂದ ನಾನು ಹೇಳುವುದು land revenue ಅನಾರ್ಥಿಕವಾದ ಹಿಡುವಳಿಗಳ ಮೇಲೆ ಹಾಕಬಾರದು. ಎರಡನೆಯದು ಕಡಮೆ ರೆವೆನ್ಯೂ ಕೊಡತಕ್ಕವರ ಮೇಲೆ ಈ ಸೆಸ್ ಬೀಳದಂತೆ ನೋಡಿಕೊಳ್ಳಬೇಕು. ಕಡಮೆ ಜಮೀನು ಇರುವವರ ಮೇಲೆ, ಮಳೆಯ ನೀರಿನಿಂದ ಮಾತ್ರ ಬೆಳೆ ತೆಗೆಯುವವರ ಮೇಲೆ ಯಾವ ತರಹದ ಕಂದಾಯ ಸೆಸ್ಸ್‌ಗಳೂ ಇರಬಾರದೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಷೆಡ್ಯೂಲ್‌ನಲ್ಲಿ ನೋಡಿದರೆ, ನಾನು ಮೊದಲೇ ಹೇಳಿದ ಹಾಗೆ ಈ ರಾಜ್ಯದಲ್ಲಿ ಕೇಂದ್ರದವರು ಕೆಲವು ಮುಖ್ಯವಾದ ಬಾಬುಗಳನ್ನು ತೆಗೆದುಕೊಂಡಿದ್ದಾರೆ. ಕೆಲವು ಬಾಬುಗಳನ್ನು ನಾವು ಸ್ಥಳೀಯ ಸಂಸ್ಥೆಗಳಿಗೆ ಬಿಟ್ಟುಕೊಟ್ಟಿದ್ದೇವೆ. ರಾಜ್ಯ ಸರ್ಕಾರದವರು, ಈಗ ಕೇಂದ್ರದವರು ಹಾಕತಕ್ಕ excise ಮೇಲೆ ತಮಗೆ ಸೆಸ್ಸ್ ಬರಬೇಕೆಂದು ಹೇಳುತ್ತಾರೆ, ಸ್ಥಳೀಯ ಸಂಸ್ಥೆಗಳು ಹಾಕತಕ್ಕ entertainment tax ಮುಂತಾದುವುಗಳ ಮೇಲೆಯೂ ತಮಗೆ ಸೆಸ್ಸ್ ಬರಬೇಕು, ನಮಗೆ ಅದರಲ್ಲಿ ಪಾಲುಬೇಕು ಎಂದು ಹೇಳುತ್ತಾರೆ ಎಲ್ಲರೂ ಹೇಳುವಂತೆ ಸಾರ್ವತ್ರಿಕವಾದ ಅಭಿವೃದ್ಧಿ ಕೆಲಸ, ಜನತೆಗೆ ಹೆಚ್ಚಿನ ಉಪಯೋಗವಾಗುವ ಕೆಲಸಗಳಾಗಬೇಕೆನ್ನುವುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಷೆಡ್ಯೂಲಿನಲ್ಲಿರುವ ಅನೇಕ ವಿಧಿಗಳನ್ನು ನೋಡಿದರೆ, ನೀರಿನ ಮೇಲೆ ಈಗಾಗಲೇ water rate ಹಾಕಿದ್ದಾರೆ, ಅದನ್ನು ಇನ್ನೂ ಹೆಚ್ಚಾಗಿ ವಸೂಲ್ ಮಾಡುವ ಸಂಭವವಿದೆ. ಅದರ ಮೇಲೆ ಸಹ ಸೆಸ್ಸ್ ಹಾಕಲು ಹೊರಟಿದ್ದಾರೆ. ಷೆಡ್ಯೂಲ್ 'A' ಮತ್ತು 'B'ನಲ್ಲಿ ಏನು ಕಾಣಿಸಿದ್ದಾರೆ, ಈ ಎಲ್ಲ ಹೊಸ ತೆರಿಗೆಗಳು, ಅದರ ಮೇಲೆ ಬೀಳತಕ್ಕ ಸೆಸ್ಸ್‌ನಿಂದ ಒಟ್ಟಿನಲ್ಲಿ ಈಗಾಗಲೇ ರೂಪಾಯಿಗೆ ಹದಿಮೂರಾಣೆಯಷ್ಟು ಬೆಲೆ ಇಳಿದಿದೆ. ಇನ್ನು ಹೆಚ್ಚು ಹಣದ ಉಬ್ಬರದಿಂದ ಆಗಿರತಕ್ಕ ತೊಂದರೆಯನ್ನು ತಾವು ಕಾಣ

ಬಹುದು. ನ್ಯಾಯವಾಗಿ ಈಗ ಒಂದು ರೂಪಾಯಿಗೆ ಮೂರಾಣೆ ಬೆಲೆ ಇರಬಹುದು ನಾನು ಲೆಕ್ಕಾಚಾರ ಮಾಡಿ ನೋಡಿಲ್ಲ.

1.00 P.M.

ಇನ್ನು ಬಹುಶಃ ಮೂರನೆ ಪಂಚವಾರ್ಷಿಕ ಯೋಜನೆ ಮುಗಿಯುವ ಹೊತ್ತಿಗೆ ಹೊರಗಡೆ ಎತ್ತಿದಂತಹ ಸಾಲಗಳು ಇನ್ನೂ ಏರುತ್ತವೆ. ಜನಗಳು ಹೊರುವ ಹೊರೆಯೂ ಹೆಚ್ಚಾಗುತ್ತದೆ. ಈಗಿರತಕ್ಕ ತೆರಿಗೆಗಳ ಜೊತೆಗೆ ಒಂದು ರೂಪಾಯಿಗೆ ಹದಿನೈದಾಣೆ ತನಕ ಹೊರೆಯನ್ನು ಹೇರುವುದರಿಂದ ನಿಜವಾದ ಬೆಲೆಯಲ್ಲಿಯೂ ಕೊರತೆಯುಂಟಾಗಬಹುದು. ತೆರಿಗೆಗಳನ್ನು ಹಾಕುವಾಗ, ತೆರಿಗೆಯನ್ನು ಸರ್ವದಾ ವಿರೋಧ ಮಾಡುವುದು ಪ್ರತಿಗಾಮಿ ಸ್ವರೂಪದ್ದು. ಮೂಲತಃ ಸರಕಾರದ ತೆರಿಗೆ ನೀತಿಯೇ ಪ್ರತಿಗಾಮಿಯಾಗಿರುವುದರಿಂದ ಅದನ್ನು ನಾವು ವಿರೋಧ ಮಾಡುತ್ತಿರುವುದರಿಂದ ಅದರ ಧೃಡತೆ ಕಮ್ಮಿಯಾಗುತ್ತದೆ ಎಂದು ನಾನು ಭಾವಿಸುವುದಿಲ್ಲ. ನಾನು ಈ ಮೊದಲೇ ಹೇಳಿದ ಹಾಗೆ, ತೆರಿಗೆಯನ್ನು ತೆಗೆದುಕೊಳ್ಳುವುದು, ಅದನ್ನು ಕೊಡುವವರೂ ನಮ್ಮ ದೇಶಕ್ಕೆ ಒಳ್ಳೆಯದಾಗಬೇಕೆಂದು ಕೊಡಬಹುದು. ಆದರೆ ಅದನ್ನು ವಸೂಲು ಮಾಡುವ ಮತ್ತು ಖರ್ಚು ಮಾಡತಕ್ಕ ಯಂತ್ರ ಒಳ್ಳೆಯ ಪರಿಶುದ್ಧವಾದ, ಪ್ರಾಮಾಣಿಕವಾದ, ಮತ್ತು ದಕ್ಷವಾದ ಯಂತ್ರವಾಗಿರಬೇಕು. ಇದು ಎಲ್ಲ ತೆರಿಗೆಗಳಿಗೂ ಅನ್ವಯಿಸುತ್ತದೆ. ಈ ಸಂದರ್ಭದಲ್ಲಿ ಕೆಲವು ಸಲ ನಮಗೇನು ಆಗುತ್ತದೆ ಎಂದರೆ, ಆಸ್ಪತ್ರೆಗಳನ್ನು ಕಟ್ಟುವಾಗಲೂ ಅದನ್ನು ವಿರೋಧಿಸುವ ಸನ್ನಿವೇಶವುಂಟಾಗುತ್ತದೆ. ನಮ್ಮ ಮೈಸೂರು ಸರಕಾರ ಕೆಲವು ಸಲ ನಮ್ಮನ್ನು ಇಂತಹ Awkward positionಗೆ ಸಿಗಿಸುತ್ತದೆ. ಸಾಮಾನ್ಯವಾಗಿ ಒಂದು ದೇವಸ್ಥಾನವನ್ನು ಕಟ್ಟುವಾಗ, ಆಸ್ಪತ್ರೆಯನ್ನು ಕಟ್ಟುವಾಗ ಅವನ್ನು ''ಧರ್ಮ'' ಎಂದು ನಮ್ಮ ದೇಶ ಹೇಳುತ್ತದೆ. ಕಾಂಗ್ರೆಸ್ಸು ಸರಕಾರದಲ್ಲಿ ಏನಾಗಿ ಬಿಟ್ಟಿದೆ ಎಂದರೆ, ಕೆಲವು ಸನ್ನಿವೇಶದಲ್ಲಿ ಆಸ್ಪತ್ರೆಗಳನ್ನು ಕಟ್ಟುವುದನ್ನೂ ವಿರೋಧಿಸಬೇಕಾಗಿ ಬರುತ್ತದೆ. ಏಕೆಂದರೆ, ಆದಕ್ಕಾಗಿ ಗೊತ್ತುಮಾಡುವ ಸ್ಥಳ, ಕಂಟ್ರಾಕ್ಟು ಕೊಟ್ಟಿರತಕ್ಕ ಜನ, ಅವರ ಎಸ್ಟಿಮೇಟುಗಳು, ಅವರು ನಡೆಸುವ ಆಸ್ಪತ್ರೆ, ಇದನ್ನು ನೋಡಿದರೆ, ಆಸ್ಪತ್ರೆಗಳನ್ನು ಕಟ್ಟುವುದೇ ಬೇಡ, ಕಂಟ್ರಾಕ್ಟರೇ ಬೇಡ ಎಂದು ಆ ತರಹ ನಾವು ವಿರೋಧ ಮಾಡಬೇಕಾಗಿ ಬರುತ್ತದೆ. ಉದ್ದೇಶವೇನೋ ಒಳ್ಳೆಯದು ಆದರೆ ಹೋಗುವ ದಿಕ್ಕು, ಮತ್ತು ಕ್ರಮ ಇದರಲ್ಲಿ ಭಾರಿ ಲೋಪವಿರುವುದರಿಂದ ಆ ಉದ್ದೇಶ ಸಾರ್ಥಕವಾಗುವುದಿಲ್ಲ. ಇವು ಹಣೆಯ ಮೇಲೆ ಕೆತ್ತಿದಂತೆ ಎದ್ದು ಕಾಣುತ್ತಿದ್ದರೂ ಕುರುಡರಂತೆ ಆಗಿದ್ದಾರೆ. ಕಣ್ಣು ಕಾಣದೆ ಇರತಕ್ಕ ಕುರುಡನನ್ನು ''ನಿನಗೆ ಸ್ವರ್ಗ ತೋರಿಸುತ್ತೇನೆ, ಅಲ್ಲಿ ದೇವೇಂದ್ರನಿದ್ದಾನೆ'' ಎಂದು ಹೇಳಿ ಒಂದು ಹತ್ತು ಹೆಜ್ಜೆ ಮುಂದಕ್ಕೆ ಕರೆದುಕೊಂಡು ಹೋಗಿ, ಇದೇ ಸ್ವರ್ಗ, ಇಲ್ಲಿಯೇ ದೇವೇಂದ್ರನಿದ್ದಾನೆ, ಎಂದು ಹೇಳುವಂತೆ ಇದು ಕುರುಡರ ಸಂತೆಯಾಗಿದೆ. ಇದಕ್ಕೆಲ್ಲಾ ಬೆಂಬಲ ಕೊಡಿ ಎಂದರೆ ಇದರ ಉದ್ದೇಶ ಸಾರ್ಥಕವಾಗುವುದಿಲ್ಲ. ಉದ್ದೇಶ ಒಳ್ಳೆಯದಿರಬಹುದು. ಆದರೆ ಕಾರ್ಯತಃ ನಮಗೆ ಸರಕಾರದಲ್ಲಿ ನಂಬಿಕೆ ಇಲ್ಲ. ಉದ್ದೇಶ ಒಳ್ಳೆಯದಿದೆ, ಅದಕ್ಕಾಗಿ ತೆರಿಗೆ ಕೊಡಿ ಎಂದು ಹೇಳಿದರೆ ಅದು ಸಮಾಧಾನಕರವಾದ ಮತ್ತು ಪೂರ್ತಿಯಾದ ಉತ್ತರವಾಗುವುದಿಲ್ಲ. ಇದನ್ನು ನಮ್ಮ ಅರ್ಥಸಚಿವರಾದ ಶ್ರೀಮಾನ್ ಜತ್ತಿಯವರೇ ವಿಚಾರ ಮಾಡಿ ನಮ್ಮ ಸಂದೇಹಗಳನ್ನು ಹೋಗಲಾಡಿಸಬೇಕು. ತನ್ಮೂಲಕ ನಮ್ಮ ಜನಗಳಲ್ಲಿರುವ ಅನುಮಾನವನ್ನು ಹೋಗಲಾಡಿಸಬೇಕು. 12 ನಯೇ ಪೈಸಾ ಎಂದಿರುವುದನ್ನು 15 ನಯೇ ಪೈಸಾ ಅಥವಾ 20 ನಯೇ ಪೈಸಾ ಎಂದು ಬೇಕಾದರೆ ಹೆಚ್ಚು ಮಾಡೋಣ. ಮಾನ್ಯ ಸದಸ್ಯರಾದ ಶ್ರೀಮಾನ್ ಅಣ್ಣಾರಾಯರು ಹೇಳಿದ ಹಾಗೆ, ವಕ್ರವಾದ ದಾರಿಯನ್ನು ಬಿಟ್ಟು ಹೋಗೋಣ, ಒಟ್ಟಿನಲ್ಲಿ ಜನಕ್ಕೆ ಕಲ್ಯಾಣ ಮಾಡುವುದಾದರೆ. ನಿಜವಾಗಿಯೂ ಎಷ್ಟು ಪಾಲು ಜನಕ್ಕೆ ಕಲ್ಯಾಣವಾಗಬೇಕೋ ಅಷ್ಟು ಆಗಿಲ್ಲ. ಅದರಲ್ಲಿ ಸ್ವತಃ ತಮಗೇ ಅನುಮಾನವಿದೆ. ಈ ಸಂದೇಹವನ್ನು ನಿವಾರಿಸಲು ನಮ್ಮ ಸರಕಾರ ಇನ್ನೂ ಬಹು ದೂರ ಹೋಗಬೇಕು. ಹೀಗೆ ಕುಂಟುತ್ತಾ ಹೋದರೆ, ಜನತೆಗೆ ಒಳ್ಳೆಯದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆಗಲೇ ನಾನು ಹೇಳಿದ ಹಾಗೆ, ಯಾವ ರೀತಿ ನಾವು ಆಸ್ಪತ್ರೆಗಳನ್ನು ನಡೆಸುತ್ತಿದ್ದೇವೆ ಎಂದರೆ, ಮೊನ್ನೆ ತಾನೇ ನಾನು ಮಲೆನಾಡು ಕಡೆ ಹೋಗಿದ್ದೆ. ಅಲ್ಲಿ ಸಾಮಾನ್ಯವಾಗಿ ನೂರಕ್ಕೆ ತೊಂಬತ್ತು ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇಲ್ಲ. ಈಗಿರುವ ವ್ಯವಸ್ಥೆಯಲ್ಲಿ ಹೇಗೆ ನಡೆದಿದೆ ಎಂದರೆ, ಆರಗ, ತೀರ್ಥಹಳ್ಳಿ, ಅರಳಸುರಳಿ, ಕೋಣಂದೂರು ಇತ್ಯಾದಿ ಭಾಗಗಳಲ್ಲಿ ಡಾಕ್ಟರುಗಳೇ ಇಲ್ಲ. ಮೆಗಾನ್ ಆಸ್ಪತ್ರೆಯಲ್ಲಿ ENT Specialist ಇಲ್ಲ. ಹೀಗೆ ಎಷ್ಟೋ ಕಡೆಗಳಲ್ಲಿ ಡಾಕ್ಟರುಗಳಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಕಾಂಪೌಂಡರು ಇರುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಕಾಂಪೌಂಡರುಗಳಿರಬಹುದು. ಕೆಲವು ಕಡೆಗಳಲ್ಲಿ ಯೋಗ್ಯರಿರಬಹುದು. ಆದರೆ ಕಾಂಪೌಂಡರುಗಳು ಔಷಧಿಗಳನ್ನು ಪ್ರಿಸ್ಕ್ರೈಬ್ ಮಾಡಬಾರದು. ಯಾರು ಬೇಕಾದರೂ ಈಗ ಔಷಧಿ ಕೊಡಬಹುದು. ಇದು ನಮ್ಮ ದೇಶದ ಸ್ಥಿತಿ. ಈ ಸ್ಥಿತಿಯಲ್ಲಿ ನಮ್ಮ ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ. ಯಾವಾಗಲೂ ಕೂಡ ಕೆಲಸವನ್ನು ಎಲ್ಲರಿಗೂ ತೃಪ್ತಿಯುಂಟಾಗುವ ಹಾಗೆ ಮಾಡಿದಾಗ, ಕೊಡುವವರಿಗೇನು, ಕೊಡೋಣ ಎನ್ನುತ್ತಾರೆ. ಆದರೆ ಈಗಿರುವ ಆಸ್ಪತ್ರೆಗಳಲ್ಲಿ ಒಳ್ಳೆಯ ಕೆಲಸವಾಗಿಲ್ಲ. ಜನಕ್ಕೆ ಸರಿಯಾದ ಪ್ರೋತ್ಸಾಹ ಕೊಡುವ ಕಡೆಗೆ ಗಮನ ಕೊಡಬೇಕು. ಈಗೇನಾಗಿದೆ ಎಂದರೆ ತಾವು ಹೋಗತಕ್ಕ ದಾರಿ, ತಾವು ನಡೆಸಿಕೊಂಡು ಹೋಗುತ್ತಿರುವ ರೀತಿ ನೀತಿಗಳನ್ನು ನೋಡಿದರೆ ಯಾರಿಗೂ ತೃಪ್ತಿ ಇಲ್ಲ. ಯಾರಿಗೂ ಸರಿಯಾದ ಪ್ರೋತ್ಸಾಹ ಕೊಡುತ್ತಿಲ್ಲ. ನಮ್ಮ ಕಾಂಗ್ರೆಸ್ಸ್ ಪಾರ್ಟಿಯವರು, ಪಾರ್ಟಿಯೊಳಗಿದ್ದೇವೆಂದು ಅನುಮೋದಿಸುತ್ತಾರೆ. ಕಾಂಗ್ರೆಸ್ಸಿಗರ ವೋಟರುಗಳಿಂದ ಬಂದಿದ್ದರೂ ಇಲ್ಲಿ ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಸರಕಾರ ನಮ್ಮ ಮುಂದಿಟ್ಟಿರುವ ತೆರಿಗೆಗಳಿಂದ ನಿಜವಾಗಿಯೂ ಜನಕ್ಕೆ ನ್ಯಾಯದಿಂದ, ಧರ್ಮದಿಂದ ಹೋಗುವಂತಹ ಆರ್ಥಿಕ ಸ್ಥಿತಿ ಏರ್ಪಡುವುದಿಲ್ಲ. ಆದ್ದರಿಂದ ಯಾರೂ ಕೂಡ ಇಂತಹ ತೆರಿಗೆಗಳಿಗೆ ಬೆಂಬಲ ಕೊಡುವುದಕ್ಕೆ ಸಾಧ್ಯವಿಲ್ಲ. ಇದು

(ಶ್ರೀ ಎಸ್. ಗೋಪಾಲಗೌಡ)

ನನ್ನ ಧೃಡವಾದ ಮತ, ಇನ್ನು ತಮ್ಮದೇ ಆದ ಸನ್ನಿವೇಶಗಳನ್ನು ಹೇಳಿಕೊಂಡು ಬೇರೆ ದಾರಿಯಲ್ಲಿ ಹೋಗಬೇಕೆಂದು ಧೃಡವಾಗಿ ನಿಶ್ಚಯಿಸಿದ್ದಾರೆ. ಆದರೆ ಇದರಿಂದಾಗುವ ಅಪಾಯಗಳನ್ನೂ ಗಮನದಲ್ಲಿಟ್ಟು ಮತ್ತು ದೇಶಕ್ಕೆ ಆಗುವ ದುಷ್ಪರಿಣಾಮಗಳಿಗೂ ಅವರೇ ಜವಾಬ್ದಾರರಾಗಿರಬೇಕೆಂದು, ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

Mr. SPEAKER.—The House will now rise and meet at 1 p.m. on Monday 10th September 1962.

The House adjourned at Ten Minutes past One of the Clock to meet again at One of the Clock on Monday, the 10th September 1962.